# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ


ದಾವಣಗೆರೆ
ಬುಧವಾರ, ಜೂನ್ 01, 2022

ಸಂಪುಟ : 49 ಸಂಚಿಕೆ : 18 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಬಸವಣ್ಣ ಪಾಠ ಪರಿಷ್ಕರಣೆಗೆ ಸಾಣೇಹಳ್ಳಿ ಶ್ರೀಗಳ ಆಕ್ಷೇಪ

**ಪಠ್ಯವನ್ನು ತಮಗೆ ಬೇಕಾದಂತೆ ತಿರುಚಲಾಗಿದೆ**

**ಲಿಂಗಾಯತ ಧರ್ಮದ ಬಗ್ಗೆ ತಪ್ಪು ಅಭಿಪ್ರಾಯ ಬರುವಂತೆ ಮಾಡಿರುವುದು ಖಂಡನಾರ್ಹ**



ಬೆಂಗಳೂರು, ಮೇ 30 – 9ನೇ ತರಗತಿಯ ಸಮಾಜ ವಿಜ್ಞಾನ ಪರಿಷ್ಕೃತ ಪಠ್ಯಪುಸ್ತಕದಲ್ಲಿ ಬಸವಣ್ಣನವರ ಕುರಿತ ಪಾಠದಲ್ಲಿ ಕೆಲ ಅಂಶಗಳನ್ನು ತೆಗೆದು ಹಾಕಲಾಗಿದೆ ಎಂದು ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಆಕ್ಷೇಪಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿರುವ ಸ್ವಾಮೀಜಿ, ಪಠ್ಯ ಸಮಿತಿಯಲ್ಲಿರುವವರು ಒಂದು ವರ್ಗಕ್ಕೆ ಸೇರಿದವರು ಎಂಬುದು ಮೇಲ್ನೋಟಕ್ಕೆ ಎದ್ದು ಕಾಣುತ್ತಿದೆ ಎಂದು ಆಕ್ಷೇಪಿಸಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿ ದುಡಿದವರು, ಶಿಕ್ಷಣ ತಜ್ಞರು, ಸಾಮಾಜಿಕ ಕಾಳಜಿಯುಳ್ಳ ದೂರದೃಷ್ಟಿಯುಳ್ಳವರು ಪಠ್ಯ ರಚನಾ ಸಮಿತಿಯಲ್ಲಿರಬೇಕು. ಅಲ್ಲಿ ಜಾತಿ, ಪಕ್ಷ ರಾಜಕಾರಣ ಹೆಡೆಯಾಡಬಾರದು ಎಂದೂ ಹೇಳಿದ್ದಾರೆ.

ವಾಟ್ಸಾಪ್‌ನಲ್ಲಿ ನಾವು ನೋಡಿರುವಂತೆ, 9ನೇ ತರಗತಿಯ ಪರಿಷ್ಕೃತ ಸಮಾಜ ವಿಜ್ಞಾನ ಪಠ್ಯಪುಸ್ತಕದ 1ನೇ ಭಾಗದಲ್ಲಿ, ಬಸವಣ್ಣನವರ ಕುರಿತ ಪಾಠವಿದೆ. ಕಳೆದ ವರ್ಷದ ಪಾಠಕ್ಕೆ ಹೋಲಿಸಿದರೆ ಈ ಬಾರಿ ಕೆಲ ಪ್ರಮುಖ ಸಾಲುಗಳನ್ನು ತೆಗೆದು, ತಮಗೆ ಬೇಕಾದವುಗಳನ್ನು ಸೇರಿಸಿದ್ದಾರೆ ಎಂದು ಆಕ್ಷೇಪಿಸಿದ್ದಾರೆ.

'ವೈದಿಕ ಮೂಲ ಧರ್ಮದಲ್ಲಿ ಬೇರೂರಿದ್ದ ಅಸಂಖ್ಯ ಧಾರ್ಮಿಕ ಆಚರಣಾ ವಿಧಿ ವಿಧಾನಗಳನ್ನು ಬದಿಗೊತ್ತಿ ಮಾನವೀಯ ಮೌಲ್ಯ ಆಧರಿತ ಸರಳ ವೀರಶೈವ ಸಿದ್ಧಾಂತವನ್ನು ಬಸವೇಶ್ವರರು (4ನೇ ಪುಟಕ್ಕೆ)

ಫಲಾನುಭವಿಗಳ ಜೊತೆ ಪ್ರಧಾನಿ ಸಂವಾದ

## ರೈತರಿಗೆ ಕಿಸಾನ್ ಸಮ್ಮಾನ್ ಯೋಜನೆ ಕಂತು ಬಿಡುಗಡೆ

ದಾವಣಗೆರೆ, ಮೇ 31 - 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಿಂದ ಪ್ರಯೋಜನ ಪಡೆದ ಫಲಾನುಭವಿಗಳೊಂದಿಗೆ ಸಂವಾದ ನಡೆಸುವ ವರ್ಚ್ಯುಯಲ್ ಕಾರ್ಯಕ್ರಮವನ್ನು ಜಿಲ್ಲಾಡಳಿತ ಭವನದಲ್ಲಿ ನೇರ ಪ್ರಸಾರ ಮಾಡಲಾಗಿತ್ತು.

ವಿವಿಧ ಯೋಜನೆಗಳಡಿ ಸವಲತ್ತುಗಳನ್ನು ಪಡೆದ ಫಲಾನುಭವಿಗಳು ಪ್ರಧಾನಮಂತ್ರಿ ನರೇಂದ್ರ ಮೋದಿಯವರೊಂದಿಗೆ ಯೋಜನೆಗಳಿಂದ ತಮಗಾಗಿರುವ ಪ್ರಯೋಜನಗಳನ್ನು ಹಂಚಿಕೊಂಡರು.

ಹಿಮಾಚಲ ಪ್ರದೇಶದ ಶೀಮ್ಲಾದಿಂದ ವರ್ಚ್ಯುಯಲ್ ಮೂಲಕ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಬಡವರ ಕಲ್ಯಾಣಕ್ಕಾಗಿಯೇ ನಾವು ಹಲವಾರು ಯೋಜನೆಗಳನ್ನು ಜಾರಿಗೊಳಿಸಿದ್ದು, 8 ವರ್ಷಗಳ ನಮ್ಮ ಆಡಳಿತದಲ್ಲಿ ನಾನು ಪ್ರಧಾನ ಸೇವಕನಾಗಿ ಕಾರ್ಯ ನಿರ್ವಹಿಸಿ ದೇಶದ 130 ಕೋಟಿ ಜನರ ಪರಿವಾರದ (3ನೇ ಪುಟಕ್ಕೆ)


**ಸಾಧನೆಗೆ ಅಭಿನಂದನೆಗಳು**



ಈ ಬಾರಿ ನಡೆದ ಯುಪಿಎಸ್‌ಸಿ ಪರೀಕ್ಷೆಯಲ್ಲಿ ದೇಶಕ್ಕೆ 31ನೇ ರ್‍ಯಾಂಕ್ ಮತ್ತು ಕರ್ನಾಟಕಕ್ಕೆ ಮೊದಲ ರ್‍ಯಾಂಕ್ ಪಡೆದುಕೊಂಡಿರುವ ದಾವಣಗೆರೆಯ ಪ್ರಸಿದ್ಧ ಹೋಟೆಲ್ ಉದ್ದಿಮೆದಾರರಾದ
ಶ್ರೀ ಕೆ.ವಿ. ಆನಂದ ರಾವ್ ಅವರ ಮೊಮ್ಮಗ ಹಾಗೂ
ಶ್ರೀ ಕೆ.ಎ.ವಿಠ್ಠಲ್ ರಾವ್ ಮತ್ತು ಶ್ರೀಮತಿ ಸ್ಮಿತಾ ರಾವ್
ಅವರ ಪುತ್ರನಾದ

**ಚಿ|| ಅವಿನಾಶ್ ರಾವ್**

ಅವರಿಗೆ ಹಾರ್ದಿಕ ಅಭಿನಂದನೆಗಳು.

♦ ಆರ್.ಪರಮೇಶ್ವರ ರಾವ್ ♦ ಆರ್.ಸುಬ್ರಹ್ಮಣ್ಯ
♦ ಆರ್.ಗುರುಪ್ರಸಾದ್ ಮತ್ತು ಕುಟುಂಬದವರು

**ಕಾವೇರಿ ಎಂಟರ್‌ಪ್ರೈಸಸ್ ಮತ್ತು ಮೋತಿ ಗ್ರೂಪ್ಸ್, ದಾವಣಗೆರೆ**



**ಜನ್ಮದಿನದ ಹಾರ್ದಿಕ ಶುಭಾಶಯಗಳು**



ಇಂದು ಹುಟ್ಟುಹಬ್ಬದ ಸಂಭ್ರಮದಲ್ಲಿರುವ
ಮಹಾನಗರ ಪಾಲಿಕೆ ಮಾಜಿ ಸದಸ್ಯರೂ,
ನಮ್ಮ ಆತ್ಮೀಯರೂ ಆದ

**ಶ್ರೀ ಎನ್. ಸುರೇಶ್ ಶಾಮನೂರು**

ಅವರಿಗೆ ಹಾರ್ದಿಕ ಶುಭಾಶಯಗಳು.

ಗಿರಳ್ಳೇರ ಪರಮೇಶ್, ಎಸ್. ಸಿದ್ದಪ್ಪ
ಗಿರಿಯಜ್ಜಿ ಶ್ರೀನಿವಾಸ್,
ಕೆ.ಎಸ್. ಪ್ರಕಾಶ್, ಶಾಮನೂರು.


## ಕ್ರೈಸ್ತ ಹಾಗೂ ಇಸ್ಲಾಂಗಳು 'ಧರ್ಮ'ದ ಬದಲು 'ರಿಲಿಜನ್'

**9ನೇ ತರಗತಿ ಪಠ್ಯ ಪರಿಷ್ಕರಣೆಯಲ್ಲಿ ಧರ್ಮಾಂತರ**

**'ಗಾಡ್' ಹಾಗೂ 'ಬ್ರಹ್ಮ' ಬೇರೆ, ರಿಲಿಜನ್ ಹಾಗೂ ಧರ್ಮ ಬೇರೆ**

**ರಿಲಿಜನ್‌ಗೆ ಬೇಕಾದ ಐದು ಅಂಶಗಳ ವ್ಯಾಖ್ಯಾನ**

ದಾವಣಗೆರೆ, ಮೇ 31 - 9ನೇ ತರಗತಿಯ ಸಮಾಜ ವಿಜ್ಞಾನ ಪಠ್ಯವನ್ನು ಸರ್ಕಾರ ಬದಲಿಸಿದೆ. ಬದಲಿಸಿದ ಪಠ್ಯದ ಮೊದಲ ಭಾಗ-1ರಲ್ಲಿ ಕ್ರೈಸ್ತ ಹಾಗೂ ಇಸ್ಲಾಂಗಳನ್ನು 'ಧರ್ಮ' ಎಂಬುದರ ಬದಲು 'ರಿಲಿಜನ್' ಎಂದು ಗುರುತಿಸಲಾಗಿದೆ.

ಕಳೆದ ವರ್ಷದ ಪಠ್ಯದಲ್ಲಿ ಅಧ್ಯಾಯ - 1ರ ಶೀರ್ಷಿಕೆ 'ಕ್ರೈಸ್ತ ಧರ್ಮ ಮತ್ತು ಇಸ್ಲಾಂ ಧರ್ಮ'ಗಳು ಎಂದಿತ್ತು. ಈ ವರ್ಷ ಅಧ್ಯಾಯ - 1ರ ಶೀರ್ಷಿಕೆ 'ಪಾಶ್ಚಾತ್ಯ ರಿಲಿಜನ್‌ಗಳು' ಎಂದು ಬದಲಿಸಲಾಗಿದೆ.

ಪರಿಷ್ಕೃತ ಪಠ್ಯಪುಸ್ತಕಗಳು ಇನ್ನೂ ಸಾಕಷ್ಟು ಶಾಲೆಗಳಿಗೆ ತಲುಪಿಲ್ಲ. ಪರಿಷ್ಕೃತ ಪಠ್ಯವನ್ನು ರಾಜ್ಯ (2ನೇ ಪುಟಕ್ಕೆ)

## ಹೊನ್ನಾಳಿ-ಹರಪನಹಳ್ಳಿ ವಿ.ಕ್ಷೇತ್ರಕ್ಕೆ ಉಸ್ತುವಾರಿಯಾಗಿ ಲತಾ- ಕವಿತಾ





ಹರಪನಹಳ್ಳಿ, ಮೇ 31- ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರ ಅನುಮೋದನೆ ಮೇರೆಗೆ ಮುಂಬರುವ ವಿಧಾನಸಭಾ ಚುನಾವಣೆಯನ್ನು (3ನೇ ಪುಟಕ್ಕೆ)


**WANTED TEACHER**

Application Invited for the Post of
**Co-ordinator for Pre-School.**
Qualification: Any Degree (Maths/Science/Engg) or MBA or Any Master Degree.
Candidate must be Good in Communication and Fluent in English.

**M: 99641 10736**


## ಈ ಬಾರಿ ವಾಡಿಕೆಗಿಂತ ಹೆಚ್ಚು ಮುಂಗಾರು

ನವದೆಹಲಿ, ಮೇ 31 – ಈ ಬಾರಿ ಮುಂಗಾರಿನಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದೀರ್ಘಾವಧಿ ಸರಾಸರಿಗೆ ಹೋಲಿಸಿದರೆ ಶೇ.103ರಷ್ಟು ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಪ್ರಧಾನ ನಿರ್ದೇಶಕ ಮೃತ್ಯುಂಜಯ್ ಮೊಹಾಪಾತ್ರ ಹೇಳಿದ್ದಾರೆ.

ದೀರ್ಘಾವಧಿ ಸರಾಸರಿಯ ಶೇ.99ರಷ್ಟು ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಕಳೆದ ಏಪ್ರಿಲ್ ತಿಂಗಳ ಮುನ್ಸೂಚನೆಯಲ್ಲಿ ತಿಳಿಸಿತ್ತು.

ಮಧ್ಯ ಹಾಗೂ ದಕ್ಷಿಣ ಭಾಗದಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಲಿದೆ. ಈಶಾನ್ಯ ಹಾಗೂ ವಾಯುವ್ಯ ಭಾಗಗಳಲ್ಲಿ ವಾಡಿಕೆಯ ಮಳೆಯಾಗಲಿದೆ ಎಂದು ಮೊಹಾಪಾತ್ರ ಹೇಳಿದ್ದಾರೆ.

## ವಿತ್ತೀಯ ಕೊರತೆ ಸಮಸ್ಯೆ ಇಳಿಕೆ

ನವದೆಹಲಿ, ಮೇ 31 – ಹೆಚ್ಚಿನ ತೆರಿಗೆ ಸಂಗ್ರಹವಾಗುತ್ತಿರುವುದರಿಂದ ವಿತ್ತೀಯ ಕೊರತೆ ಸಮಸ್ಯೆ ತಗ್ಗಿದ್ದು, ಜಿ.ಡಿ.ಪಿ.ಯ ಶೇ.6.71ಕ್ಕೆ ತಲುಪಿದೆ. ಪರಿವರ್ತಿತ ಬಜೆಟ್ ಅಂದಾಜಿನಲ್ಲಿ ಶೇ.6.9ರ ವಿತ್ತೀಯ ಕೊರತೆಯ ನಿರೀಕ್ಷೆ ಇತ್ತು.

2020-21ರ ಸಾಲಿನಲ್ಲಿ 15.91 ಲಕ್ಷ ಕೋಟಿ ರೂ.ಗಳ ವಿತ್ತೀಯ ಕೊರತೆಯಾಗುವ ನಿರೀಕ್ಷೆ ಇತ್ತು. ವಾಸ್ತವಿಕವಾಗಿ 15.86 ಲಕ್ಷ ಕೋಟಿ ರೂ.ಗಳ ಕೊರತೆ (3ನೇ ಪುಟಕ್ಕೆ)


**ಜನ್ಮದಿನದ ಶುಭಾಶಯಗಳು**



ಇಂದು ತಮ್ಮ ಜನ್ಮ ದಿನದ ಸಂಭ್ರಮದಲ್ಲಿರುವ ದಾವಣಗೆರೆ ಬಿ.ಜೆ.ಪಿ
ಜಿಲ್ಲಾಧ್ಯಕ್ಷರು ಮತ್ತು ಆತ್ಮೀಯರೂ ಆದ

**ಶ್ರೀ ಎಸ್.ಎಮ್. ವೀರೇಶ್ ಹನಗವಾಡಿ**

ಅವರಿಗೆ ಹಾರ್ದಿಕ ಶುಭಾಶಯಗಳು

♦ ಕರಿಬಸಪ್ಪ ಹೆಚ್.ಆರ್., ಆವರಗೊಳ್ಳ ಹೆಚ್. ರುದ್ರಪ್ಪ ಅಂಡ್ ಸನ್ಸ್.
♦ ಮಹೇಶ್ ಕಬ್ಬೂರು, ಕಬ್ಬೂರು ಗಂಗಜ್ಜರ ಬಸವರಾಜಪ್ಪ & ಸನ್ಸ್
♦ ಪ್ರದೀಪ್ ಕಂಸಾಗರ, ಕೆ. ಪಂಚಾಕ್ಷರಪ್ಪ ಅಂಡ್ ಸನ್
♦ ಬಾಳೆಹೊಲದ ಬಸವರಾಜ್, ಬಾಳೆಹೊಲದ ಮಹೇಶ್ವರಪ್ಪ ಅಂಡ್ ಸನ್ಸ್
♦ ಶಿವಕುಮಾರ್ ಜಿ.ಬಿ., ಜಿ. ಬಸವರಾಜಪ್ಪ ಅಂಡ್ ಸನ್ಸ್
♦ ಕಾವಲಹಳ್ಳಿ ನಿಂಗಪ್ಪ ಅಂಡ್ ಸನ್ಸ್
♦ ಕಾವಲಹಳ್ಳಿ ಮಹದೇವಪ್ಪ ಅಂಡ್ ಸನ್ಸ್
♦ ಕಬ್ಬೂರು ಪ್ರಕಾಶ್ ಅಂಡ್ ಸನ್ಸ್
♦ ಬಾತಿ ಸದಾನಂದ್ ಅಂಡ್ ಕೋ
♦ ಬಾತಿ ಸುರೇಶ್ ಅಂಡ್ ಕೋ
♦ ಬಾತಿ ಪ್ರಕಾಶ್, ಶ್ರೀ ರೇವಣಸಿದ್ದೇಶ್ವರ ದಲಾಲಿ ಮಂಡಿ
♦ ಬೇತೂರು ಮರಡಿ ಅರುಣ್ ಕುಮಾರ್

HAPPY BIRTHDAY



**The Crowned King of Courses : Commerce**

**Seminar**
*An emerging group with*
**GLOBAL OPPORTUNITIES**

Seminar by :
Sri Harsha D. E. M.Com, A.C.A
Chartered Accountant, Davangere

Dr. C. Muralikrishna
Chief Academic Advisor

Date : 3-6-2022 Time : 10 am
Venue : SIR MV Hostel Campus, Lokikere Road, Davangere

*All Students and Parents are Invited for the Seminar*

For Details Contact :
93805 29079

*II PU Results 2021*



600/600 YUVARAJ N.



600/600 DEEPIKA MELGODE

Distinctions 31 | First Class 44 | Combination • EBAS • EBACs
Economics 100/100 For 5 Students | Bussiness studies 100/100 For 5 Students | Accountancy 100/100 For 5 Students | Statistics 100/100 For 5 Students

Highest number of students qualified in CA / CMA Foundation exams from SIR M V, Davangere

**CA Foundation Qualified**

TARUN M R 273/400, SHAKTHI G.S. 271/400, NIKETH M S 259/400
DEEPIKA M. 248/400, PRAJWAL P. R. 244/400, MEGHA N V 243/400
TEJASWINI K N 243/400, IQRA BANU 233/400, SHASHANK G.S 219/400
VARSHINI 206/400, SWATHI S 201/400, MONISHA N G 200/400

SSLC Students who secured 95% and above 90% concession

100% QUALIFIED

**CMA Foundation Qualified**

NAYANA P D 283/400, SWATHI S. 278/400, SINDHU P. M. 253/400
HARSHITHA G. 245/400, SAGAR M. V 234/400, PURUSHOTHAM 234/400
DEEPIKA T. 216/400, SOHINI ARALI 215/400, PALLAVI K. 200/400

**SIR M V P U COLLEGE**
Near Govt. ITI College, Hadadi Road, DAVANGERE
Ph: 08192-261200, 92433 12223, 87221 41400.

# ಸಮಾಜದಲ್ಲಿನ ಸವಾಲು ಎದುರಿಸಲು ಮತ್ತೊಮ್ಮೆ ಶ್ರೀ ವೀರಭದ್ರಸ್ವಾಮಿ ಅವತಾರವಾಗಬೇಕಿದೆ

## ಮಲೇಬೆನ್ನೂರಿನ ಧಾರ್ಮಿಕ ಕಾರ್ಯಕ್ರಮದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು



ಮಲೇಬೆನ್ನೂರು, ಮೇ 31- ದುಷ್ಟ ಶಕ್ತಿಗಳನ್ನು ನಾಶಪಡಿಸಲು ವೀರಭದ್ರೇಶ್ವರ ಸ್ವಾಮಿ ಶಿವನ ಜಟಿಲದಿಂದ ಅವತರಿಸಿ ಬಂದು ದಕ್ಷ ಬ್ರಹ್ಮನ ದರ್ಪವನ್ನು ಸರ್ವನಾಶ ಮಾಡಿದಂತೆ, ಪ್ರಸ್ತುತ ಸಮಾಜದಲ್ಲಿ ನಡೆಯುತ್ತಿರುವ ಸಮಸ್ಯೆ, ಸವಾಲುಗಳನ್ನು ಎದುರಿಸಲು ಮತ್ತೊಮ್ಮೆ ಶ್ರೀ ವೀರಭದ್ರೇಶ್ವರನ ಅವತಾರವಾಗಬೇಕಿದೆ ಎಂದು ರಂಭಾಪುರಿ ಪೀಠದ ಶ್ರೀ ಜಗದ್ಗುರು ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಪಟ್ಟಣದ ಹೊರವಲಯದಲ್ಲಿರುವ ಶ್ರೀ ವೀರ ಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ದೇವಸ್ಥಾನದ ಪ್ರಥಮ ವಾರ್ಷಿಕೋತ್ಸವದ ಅಂಗವಾಗಿ ಇಂದು ಹಮ್ಮಿಕೊಂಡಿದ್ದ ಇಷ್ಟಲಿಂಗ ಮಹಾಪೂಜೆಯನ್ನು ನೆರವೇರಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ವ್ಯಕ್ತಿಗಳು ಶಕುನಿಗಳಾಗಿ ಕೆಲಸ ಮಾಡಿದರೆ ಸಮಾಜ ಛಿದ್ರವಾಗುತ್ತದೆ. ಬದಲಿಗೆ ವ್ಯಕ್ತಿ ವೀರಭದ್ರನಾಗಿ ಸಮಾಜವನ್ನು ಭದ್ರಗೊಳಿಸುವ ಕೆಲಸ ಮಾಡಬೇಕಿದೆ. ಮನುಷ್ಯನಿಗೆ ಇರಬೇಕಾದ ಶಾಂತಿ, ಸಮಾಧಾನ, ಸಂತೃಪ್ತಿ ಇಲ್ಲದಂತಾಗಿದ್ದು, ಶಿವಜ್ಞಾನದ ಅರಿವು, ಅಧ್ಯಾತ್ಮದ ಜ್ಞಾನವನ್ನು ಸಂಪಾದಿಸಿಕೊಂಡರೆ ಬದುಕು ಬಂಗಾರವಾಗುತ್ತದೆ ಎಂದು ಸ್ವಾಮೀಜಿ ತಿಳಿಸಿದರು.

ಮಾನವ ಜನ್ಮ ಬಂಜೆ ಅಲ್ಲ. ಜನ್ಮ ಜನ್ಮದಲ್ಲಿ ಮಾಡಿದ ಪುಣ್ಯದ ಬುತ್ತಿಯನ್ನು ಅಡವಿಟ್ಟು ಈ ಜನ್ಮ ಪಡೆದಿದ್ದೇವೆ. ಗುರು ಕಾರುಣ್ಯವನ್ನು ಪಡೆದುಕೊಳ್ಳದಿದ್ದರೆ, ಮಾನವ ಜನ್ಮ ವ್ಯರ್ಥವಾಗುತ್ತದೆ. ಶಾಂತಿ, ನೆಮ್ಮದಿಯ ಬದುಕಿಗೆ ಸತ್ ಸಂಪ್ರದಾಯವನ್ನು ಉಳಿಸಿಕೊಂಡು ಧರ್ಮ, ಸಂಸ್ಕೃತಿ ಉಳಿವಿಗಾಗಿ ನಮ್ಮನ್ನು ನಾವು ಸಮರ್ಪಿಸಿಕೊಳ್ಳಬೇಕು ಎಂದು ಜಗದ್ಗುರುಗಳು ಕರೆ ನೀಡಿದರು.

ಪ್ರತಿಯೊಬ್ಬರಿಗೂ ದೇವರನ್ನು ಅರಿಯುವ ಜ್ಞಾನ ಇದ್ದು, ಅವ್ಯಕ್ತವಾದ ಚೇತನ ಶಕ್ತಿ ಮನಸ್ಸಿನ ಮೇಲೆ ಪರಿಣಾಮ ಬೀಳಿಸಿಕೊಂಡು ದೇವರಿಗಾಗಿ, ಧರ್ಮಕ್ಕಾಗಿ ನಮ್ಮನ್ನು ನಾವು ತೊಡಗಿಸಿಕೊಂಡು ನಡೆದರೆ ಬದುಕು ಸಾರ್ಥವಾಗುತ್ತದೆ ಎಂದು ಶ್ರೀಗಳು ಪ್ರತಿಪಾದಿಸಿದರು.

ಸರ್ವಾಂಗ ಸುಂದರವಾಗಿರುವ ಈ ದೇವಸ್ಥಾನ ಭಕ್ತರ ಭಕ್ತಿಯ ಕೇಂದ್ರವಾಗಿ ಎಲ್ಲರನ್ನು ಆಕರ್ಷಿಸುತ್ತಿದೆ. ಇಷ್ಟೊಂದು ವಾಸ್ತು ಇರುವ ದೇವಸ್ಥಾನ ಬೇರೆ ಎಲ್ಲಿಯೂ ಇಲ್ಲ. ಲಿಂ. ಬಿ.ವೀರಣ್ಣ ಅವರು ಈ ದೇವಸ್ಥಾನ ಕಟ್ಟುವ ಸಂಕಲ್ಪ ಮಾಡಿ, ಅವರ ಜೀವಿತ ಕಾಲದಲ್ಲಿಯೇ ಇದಕ್ಕೊಂದು ರೂಪುರೇಷೆ ನೀಡಿ ಅನಾರೋಗ್ಯದಿಂದ ನಮ್ಮೆಲ್ಲರನ್ನು ಅಗಲಿದರು ಎಂದರು.

ಅವರ ಆಶಯದಂತೆ ಬಿ. ಚಿದಾನಂದಪ್ಪ ಮತ್ತು ಅವರ ಸಹೋದರರು, ಬಂಧು-ಮಿತ್ರರು ಸೇರಿ ಎಲ್ಲರ ಸಹಕಾರ ಪಡೆದು, ನಾಡಿನ ಅಧ್ಯಾತ್ಮ ಜೀವಿಗಳಿಗೆ ಅತ್ಯಂತ ಆನಂದ ಉಂಟು ಮಾಡುವಂತಹ ದೇವಸ್ಥಾನ ನಿರ್ಮಿಸಿದ್ದಾರೆ. ಭಕ್ತರಿಗೆ ವರದಾನ ನೀಡುವ ಕಾಮಧೇನು, ಕಲ್ಪವೃಕ್ಷನಾಗಿ ಶ್ರೀ ವೀರಭದ್ರೇಶ್ವರ ಸ್ವಾಮಿ ಇಲ್ಲಿ ನೆಲೆಸಿರುವುದು ಈ ಭಾಗದ ಜನರ ಪುಣ್ಯ ಎಂದು ರಂಭಾಪುರಿ ಶ್ರೀಗಳು ಅಭಿಪ್ರಾಯಪಟ್ಟರು.

ವೀರಭದ್ರೇಶ್ವರ ಸ್ವಾಮಿಯನ್ನು ಕೇವಲ ವೀರಶೈವರು ಮಾತ್ರ ಪೂಜೆ ಮಾಡುತ್ತಿಲ್ಲ. ಇತರರೂ ಭಕ್ತಿಯಿಂದ ಪೂಜೆ ಮಾಡುತ್ತಾರೆ. ಈ ನಾಡಿನಲ್ಲಿ ಎಲ್ಲಿಯೇ ವೀರಭದ್ರೇಶ್ವರ ದೇವಸ್ಥಾನವಿರಲಿ ಅದರ ಮೂಲ ಶಕ್ತಿ ಕೇಂದ್ರ, ರಂಭಾಪುರಿ ಪೀಠದಲ್ಲಿದೆ ಎಂದು ಸ್ವಾಮೀಜಿ ತಿಳಿಸಿದರು.

ದೇವಸ್ಥಾನ ಟ್ರಸ್ಟ್ ಉಪಾಧ್ಯಕ್ಷ ಬಿ. ಚಿದಾನಂದಪ್ಪ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಮಾಜಿ ಶಾಸಕರಾದ ಹೆಚ್.ಎಸ್. ಶಿವಶಂಕರ್, ಮಹಿಮಾ ಪಟೇಲ್, ಮಲೇಬೆನ್ನೂರು ಪಿಎಸ್ಐ ರವಿಕುಮಾರ್, ಹರಿಹರ ಗ್ರಾಮಾಂತರ ಪಿಎಸ್ಐ ವೀರಬಸಪ್ಪ, ಪ್ರೊಬೇಷನರಿ ಪಿಎಸ್ಐ ಶ್ರೀಪತಿ, ದೇವಸ್ಥಾನ ಟ್ರಸ್ಟ್‌ನ ಅಧ್ಯಕ್ಷ ಬಿ. ಪಂಚಪ್ಪ, ಬಿ. ನಾಗೇಂದ್ರಪ್ಪ, ಬಿ. ಮಹಾರುದ್ರಪ್ಪ, ಬಿ. ಉಮಾಶಂಕರ್, ಬಿ. ನಾಗೇಶ್, ಬಿ. ಶಂಭುಲಿಂಗಪ್ಪ, ಬಿ. ಮಲ್ಲಿಕಾರ್ಜುನ್, ಎನ್.ಕೆ. ಬಸವರಾಜ್, ಬಿ.ವಿ. ರುದ್ರೇಶ್, ಎಸ್.ಎನ್. ಶಂಭುಲಿಂಗಪ್ಪ ಸೇರಿದಂತೆ, ಅನೇಕರು ಭಾಗವಹಿಸಿದ್ದರು.

## ರಾಣೇಬೆನ್ನೂರು : ತಂಬಾಕು ನಿಷೇಧ ಜಾಥಾ



ರಾಣೇಬೆನ್ನೂರು, ಮೇ 31 - ಕಾನೂನು ಸೇವಾಸಮೀತಿ, ಆರೋಗ್ಯ ಇಲಾಖೆ, ತಾಲ್ಲೂಕು ಆಡಳಿತ, ವಕೀಲರ ಸಂಘ ಸಂಯುಕ್ತವಾಗಿ ಇಂದು ತಂಬಾಕು ನಿಷೇದ ದಿನಾಚರಣೆ ಆಚರಿಸಿದರು.

ವಯಸ್ಸಾದವರಿಗಿಂತ ಅತೀ ಹೆಚ್ಚು ಹರೆಯದ ತರುಣರೆ ತಂಬಾಕು ಮಿಶ್ರಿತ ವಸ್ತುಗಳನ್ನು ಸೇವನೆ ಮಾಡುತ್ತಿದ್ದು, ಅದರಿಂದ ಆರೋಗ್ಯದ ಮೇಲೆ ಆಗುವ ಪರಿಣಾಮಗಳ ಅರಿವು ಮೂಡಿಸಲು ಸರ್ಕಾರ ಈ ದಿನಾಚರಣೆ ಆಚರಿಸುತ್ತಿದೆ ಎಂದು ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಮತ್ತು ಸತ್ರ ನ್ಯಾಯಾದೀಶ ಎಸ್. ಭೃಂಗೇಶ ಹೇಳಿದರು. ಕಾನೂನು ಸಮಿತಿ ಅಧ್ಯಕ್ಷ ವೈ. ಎಲ್. ಲಾಡಖಾನ್, ನ್ಯಾಯಾಧೀಶರುಗಳಾದ ಬಿ. ಸಿದ್ದರಾಜು, ಪದ್ಮಾಕರ ವನಕುದುರೆ, ಅನಿತಾ, ಡಿ.ವೈ ಎಸ್.ಪಿ ಟಿ.ವಿ. ಸುರೇಶ್, ತಹಶೀಲ್ದಾರ್ ಸಿದ್ದನಗೌಡ್ರು ಮತ್ತು ಇತರರು ಜಾಥಾದಲ್ಲಿ ಪಾಲ್ಗೊಂಡಿದ್ದರು.

## ಶ್ರೀ ಸಾಯಿ ಕ್ರೆಡಿಟ್ ಕೋ- ಆಪ್ ಸೊಸೈಟಿಗೆ ನಿರ್ದೇಶಕರ ಆಯ್ಕೆ

ದಾವಣಗೆರೆ, ಮೇ 31- ನಗರದ ಶ್ರೀ ಸಾಯಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ನಿರ್ದೇಶಕರ ಸ್ಥಾನಕ್ಕೆ ಮೊನ್ನೆ ನಡೆದ ಚುನಾವಣೆ ಯಲ್ಲಿ ಪರಿಶಿಷ್ಟ ಜಾತಿ ವರ್ಗದಿಂದ ವೀರಕುಮಾರ್ (ನಿವೃತ್ತ ಎಇಇ) 64 ಮತಗಳನ್ನು ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿ ಟಿ. ರಂಗಪ್ಪ ಮುದಹದಡಿ ಜಮೀನ್ದಾರರು ಇವರು 61 ಮತಗಳನ್ನು ಪಡೆದು ವಿಜೇತರಾಗಿದ್ದಾರೆ. ಸಾಮಾನ್ಯ ವರ್ಗದಿಂದ ಎನ್.ಎಸ್. ರೇವಣಸಿದ್ಧಪ್ಪ, ಎಂ. ಸವಿತಾ ಪ್ರಕಾಶ್, ರುದ್ರಪ್ಪ ಬಸಪ್ಪ ಪೊಲೀಸ್ ಗೌಡರ್, ಮಾವುಶೆಟ್ಟರ್, ಬಿ.ಕೆ. ಬಸಪ್ಪ, ಬಿ.ಹೆಚ್. ಗುಡ್ಡಾಚಾರ್, ಬಿ.ಎನ್. ಶಿವಣ್ಣಾಚಾರ್, ಅಣಜಿ ನಾಗರಾಜ್, ಕೆ.ವೈ. ಮಧುಕುಮಾರ್, ಮಹಿಳಾ ಅಭ್ಯರ್ಥಿಗಳಾಗಿ ಮಂಜುಳ, ಶಶಿಕಲಾ, ಪ್ರವರ್ಗ ಬಿ ಯಿಂದ ಮಹಮದ್ ದಸ್ತಗಿರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಮಲೇಬೆನ್ನೂರಿನಲ್ಲಿ ಇಂದು ಸತ್ಸಂಗ

ಶ್ರೀ ಭದ್ರಕಾಳಿ ಸಮೇತ ಇರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಪ್ರಥಮ ವಾರ್ಷಿಕೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ಚಳ್ಳಕೆರೆ ತಾಲ್ಲೂಕು ದೊಡ್ಡೇರಿ ಶ್ರೀ ಸತ್ ಉಪಾಸಿ ಅವಧೂತರಿಂದ ಹೋಮ, ಯಜ್ಞ, ಹವನ, ಭಜನೆ, ಸತ್ಸಂಗ ನಡೆಯಲಿದೆ.

## ದೊಡ್ಡಬಾತಿ ಗ್ರಾ.ಪಂ ಅಧ್ಯಕ್ಷರ ವಿರುದ್ಧ ಮಂಡಿಸಿದ್ದ ಅವಿಶ್ವಾಸಕ್ಕೆ ಜಯ

ದಾವಣಗೆರೆ, ಮೇ 31- ದೊಡ್ಡಬಾತಿ ಗ್ರಾಮ ಪಂಚಾಯ್ತಿ ಅಧ್ಯಕ್ಷ ಜೆಸಿಬಿ ಹನುಮಂತಪ್ಪ ಅವರ ವಿರುದ್ಧ ಮಂಡಿಸಲಾಗಿದ್ದ ಅವಿಶ್ವಾಸ ನಿರ್ಣಯದ ಸಭೆಯಲ್ಲಿ ಗ್ರಾ.ಪಂ 17 ಸದಸ್ಯರ ಪೈಕಿ 13 ಸದಸ್ಯರು ಅವಿಶ್ವಾಸದ ಪರವಾಗಿ ಕೈ ಎತ್ತುವ ಮೂಲಕ ಬೆಂಬಲ ಸೂಚಿಸಿದರು. ಈ ಮೂಲಕ ಗ್ರಾ.ಪಂ. ಅಧ್ಯಕ್ಷ ಹನುಮಂತಪ್ಪ ಅವರನ್ನು ಪದಚ್ಯುತಿ ಗೊಳಿಸಲಾಯಿತು. ಅವಿಶ್ವಾಸ ಸಭೆಗೆ ಅಧ್ಯಕ್ಷ ಹನುಮಂತಪ್ಪ, ಉಪಾಧ್ಯಕ್ಷೆ ತಿಪ್ಪಮ್ಮ ಸೇರಿದಂತೆ ನಾಲ್ವರು ಸದಸ್ಯರು ಗೈರು ಹಾಜರಾಗಿದ್ದರು. ಉಪವಿಭಾಗಾಧಿಕಾರಿ ದುರ್ಗಶ್ರೀ ಅವರ ಅಧ್ಯಕ್ಷತೆಯಲ್ಲಿ ಈ ಅವಿಶ್ವಾಸ ಮಂಡನೆ ಸಭೆ ಜರುಗಿತು.

# ನಾಳೆ ವೀರೇಶ್ ಹನಗವಾಡಿ ಜನ್ಮ ದಿನಾಚರಣೆ



**ಹರಿಹರ** ತಾಲ್ಲೂಕು ಬಿಜೆಪಿ ಘಟಕದ ಮಾಜಿ ಅಧ್ಯಕ್ಷರಿಗೆ ಮತ್ತು ಪ್ರಧಾನ ಕಾರ್ಯದರ್ಶಿಗಳಿಗೆ ಸನ್ಮಾನವನ್ನು ಶಾಸಕ ಎಸ್.ಎ. ರವೀಂದ್ರನಾಥ ನೆರವೇರಿಸುವರು.

ಹರಿಹರ, ಮೇ 31 - ನಗರದ ಸಿದ್ದೇಶ್ವರ ಪ್ಯಾಲೇಸ್ ಸಭಾಂಗಣದಲ್ಲಿ ಜೂನ್ 2 ರ ಗುರುವಾರ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಅವರ 48 ನೇ ಹುಟ್ಟು ಹಬ್ಬವನ್ನು ಹನಗವಾಡಿ ಎಸ್.ಎಂ. ವೀರೇಶ್ ಸ್ನೇಹ ಬಳಗದ ವತಿಯಿಂದ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಗ್ರಾಮಾಂತರ ಘಟಕದ ಮಾಜಿ ಅಧ್ಯಕ್ಷ ನಾಗನಗೌಡ ಕೆ.ಎನ್. ಹಳ್ಳಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಸಮಾರಂಭದಲ್ಲಿ ಸೇವಾ ಸಾಧಕರಿಗೆ ಸನ್ಮಾನ, ಸರ್ಕಾರಿ ಪ್ರೌಢಶಾಲಾ ಮಕ್ಕಳಿಗೆ 30 ಸಾವಿರ ನೋಟ್‌ಬುಕ್ ವಿತರಣೆ ನೆರವೇರಿಸಲಾಗುವುದು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ವಹಿಸುವರು. ಅಧ್ಯಕ್ಷತೆಯನ್ನು ಬಿ.ಎಸ್. ಸೋಮಸುಂದರಪ್ಪ, ಉದ್ಘಾಟನೆಯನ್ನು ರಾಜ್ಯ ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮಾಡಲಿದ್ದಾರೆ.

ನೋಟ್ ಬುಕ್ ವಿತರಣೆಯನ್ನು ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಮಾಡುವರು. ಆಶಾ ಕಾರ್ಯಕರ್ತರಿಗೆ ಮತ್ತು ಪತ್ರಕರ್ತರಿಗೆ ಸನ್ಮಾನವನ್ನು ಸಂಸದ ಜಿ.ಎಂ. ಸಿದ್ದೇಶ್ವರ, ಅಂಗನವಾಡಿ ಕಾರ್ಯಕರ್ತರಿಗೆ ಸನ್ಮಾನವನ್ನು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್,

ಮುಖ್ಯ ಅತಿಥಿಗಳಾಗಿ ಶಾಸಕರುಗಳಾದ ಎಂ.ಪಿ. ರೇಣುಕಾಚಾರ್ಯ, ಕೆ. ಮಾಡಾಳ್ ವಿರುಪಾಕ್ಷಪ್ಪ, ಎಸ್.ವಿ. ರಾಮಚಂದ್ರಪ್ಪ, ಪ್ರೊ. ಲಿಂಗಣ್ಣ, ಪರಿಷತ್ ಸದಸ್ಯ ಕೆ.ಎಸ್.ನವೀನ್, ಮಾಜಿ ಶಾಸಕ ಬಿ.ಪಿ. ಹರೀಶ್, ಬಿಜೆಪಿ ಹಿರಿಯ ಮುಖಂಡರಾದ ಎನ್.ಜಿ. ನಾಗನಗೌಡ್ರು ಹಾಗು ಇತರರು ಭಾಗವಹಿಸಲಿದ್ದಾರೆ.

ಈ ಸಂದರ್ಭದಲ್ಲಿ ಬಿಜೆಪಿ ಮಾಜಿ ಅಧ್ಯಕ್ಷ ಹಲಸಬಾಳು ಶಿವಾನಂದಪ್ಪ, ನಗರಸಭೆ ಸದಸ್ಯರಾದ ರಜನಿಕಾಂತ್, ಅಶ್ವಿನಿ ಕೃಷ್ಣ, ಹನುಮಂತಪ್ಪ, ಮುಖಂಡರಾದ ಸಾಲಕಟ್ಟೆ ಸಿದ್ದಪ್ಪ, ಶ್ರೀನಿವಾಸ್ ಚಂದಪೂರ್, ರಾಘವೇಂದ್ರ, ತುಳಜಪ್ಪ ಭೂತೆ, ಪ್ರವೀಣ್, ಬೆಳ್ಳೂಡಿ ಬಕ್ಕೇಶ್, ಸುರೇಶ್ ತೆರದಾಳ, ಆನಂದ್, ರೂಪಾ ಕಾಟ್ವೆ, ರಾಘವೇಂದ್ರ, ಸಂತೋಷ ಗುಡಿಮನಿ ಹಾಗು ಇತರರು ಹಾಜರಿದ್ದರು.

## ಹರಪನಹಳ್ಳಿ : ಟಿಕಾಯತ್ ಮುಖಕ್ಕೆ ಮಸಿ ಖಂಡಿಸಿ ಪ್ರತಿಭಟನೆ



ಹರಪನಹಳ್ಳಿ, ಮೇ 31- ರಾಷ್ಟ್ರೀಯ ರೈತ ಹೋರಾಟಗಾರ ರಾಖೇಶ್ ಟಿಕಾಯತ್ ಮುಖಕ್ಕೆ ಮಸಿ ಬಳಿದು ಹಲ್ಲೆ ಮಾಡಿರುವುದನ್ನು ಖಂಡಿಸಿ, ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ನಂತರ ಮಾತನಾಡಿದ ಪ್ರತಿಭಟನಾಕಾರರು ಕೇಂದ್ರ ಸರ್ಕಾರ ಜಾರಿಗೆ ತಂದಿದ್ದ ರೈತ ವಿರೋಧಿ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ವರ್ಷಾನುಗಟ್ಟಲೆ ಹೋರಾಟ ಮಾಡಿ ಕೃಷಿ ರದ್ದತಿಗೆ ಕಾರಣರಾದ ರೈತ ಹೋರಾಟಗಾರ ರಾಖೇಶ ಟಿಕಾಯಿತ್ ಮೇಲೆ ಆರ್‌ಎಸ್‌ಎಸ್ ಹಾಗೂ ಬಿಜೆಪಿ ಕಾರ್ಯರ್ತರು ಹಲ್ಲೆ ಮಾಡಿ ಮಸಿ ಹಾಕಿರುವುದು ಭಾರತ ದೇಶದ ರೈತರ ಸ್ವಾಭಿಮಾನ ಕೆಣಕಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಇದ್ಲಿ ರಾಮಪ್ಪ, ಕುಂಚೂರು ಶಫಿವುಲ್ಲಾ, ಎ.ಎಂ. ವಿಶ್ವನಾಥ, ಗೌರಿಹಳ್ಳಿ ಹನುಮಂತಪ್ಪ, ಬೂದಾಳು ಸಿದ್ದೇಶ, ಇಮಾಮ್ ಹುಸೇನ್, ಸಂದೇರ ಪರಶುರಾಮ, ಹನುಮಂತಪ್ಪ, ನೀಲಕಂಠಪ್ಪ, ರಮೇಶ, ಮಹಾದೇವಪ್ಪ ಇತರರು ಉಪಸ್ಥಿತರಿದ್ದರು.

# ಕ್ರೈಸ್ತ ಹಾಗೂ ಇಸ್ಲಾಂಗಳು 'ಧರ್ಮ'ದ ಬದಲು 'ರಿಲಿಜನ್'

**(1ನೇ ಪುಟದಿಂದ)** ಸರ್ಕಾರದ ಕರ್ನಾಟಕ ಪಠ್ಯಪುಸ್ತಕಗಳ ಸಂಘದ ವೆಬ್ ತಾಣವಾದ https://www.ktbs.kar.nic.in ರಲ್ಲಿ ಡೌನ್‌ಲೋಡ್ ಮಾಡಿಕೊಂಡಾಗ ಈ ಬದಲಾವಣೆ ಕಂಡು ಬಂದಿದೆ.

ಕಳೆದ ವರ್ಷದ ಪಠ್ಯದಲ್ಲಿ ಕ್ರೈಸ್ತ ಹಾಗೂ ಇಸ್ಲಾಂ ಧರ್ಮಗಳ ಬಗ್ಗೆ ಮಾತ್ರ ತಿಳಿಸಲಾಗಿತ್ತು. ಪರಿಷ್ಕೃತ ಪಠ್ಯದಲ್ಲಿ ಯಹೂದಿ ಹಾಗೂ ಪಾರ್ಸಿ 'ರಿಲಿಜನ್'ಗಳ ಬೆಳವಣಿಗೆ ಮತ್ತು ಬೋಧನಗೆಳ ಕುರಿತೂ ತಿಳಿಸಲಾಗಿದೆ.

'ಜಗತ್ತಿನ ಪ್ರಮುಖ ರಿಲಿಜನ್‌ಗಳಲ್ಲಿ ಮುಖ್ಯವಾದವು ಯಹೂದಿ, ಪಾರ್ಸಿ, ಕ್ರೈಸ್ತ ಮತ್ತು ಇಸ್ಲಾಂ. ಇವು ಪಾಶ್ಚಾತ್ಯ ಪ್ರದೇಶಗಳಲ್ಲಿ ಜನ್ಮ ತಾಳಿದವು. ಇವುಗಳನ್ನು ಸೆಮೆಟಿಕ್ ರಿಲಿಜನ್‌ಗಳೆಂದೂ ಕರೆಯುವರು. ಇವು ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಹರಡಿಕೊಂಡಿವೆ' ಎಂದು ತಿಳಿಸಲಾಗಿದೆ. 'ನಿಮಗಿದು ತಿಳಿದಿರಲಿ' ಎಂಬ ಉಪ ಶೀರ್ಷಿಕೆಯಲ್ಲಿ ರಿಲಿಜನ್ ಅಂದರೆ ಏನು ಎಂಬ ಬಗ್ಗೆ ವಿವರಣೆ ನೀಡಲಾಗಿದೆ. ಅದರ ಪ್ರಕಾರ, 'ರಿಲಿಜನ್‌ಗಳೆಂದರೆ ಈ ಬ್ರಹ್ಮಾಂಡವನ್ನು ಸೃಷ್ಟಿಸಿದ ಗಾಡ್‌ನು ಮಾನವರ ಪ್ರವಾದಿಗೆ ತಿಳಿಸಿದ ಸತ್ಯವಾದ ಮಾರ್ಗಗಳು. ಈ ಮಾರ್ಗವನ್ನು ತಿಳಿದ ಪ್ರವಾದಿ, ಸತ್ಯವನ್ನು ಸಾರುವ ಪವಿತ್ರ ಗ್ರಂಥ ಹಾಗೂ ಆಚರಣೆಯನ್ನು ವಿಧಿಸುವ ತತ್ವಗಳು ಒಂದು ರಿಲಿಜನ್‌ಗೆ ಬುನಾದಿಗಳು. ಈ ಕಲ್ಪನೆ ಮೇಲ್ಕಂಡ ರಿಲಿಜನ್‌ಗಳಿಗೆ ಮಾತ್ರವೇ ಸೀಮಿತವಾಗಿದೆ'.

ಇದೇ ಅಧ್ಯಾಯದಲ್ಲಿ ಮುಂದುವರೆದ ಭಾಗದಲ್ಲಿ ರಿಲಿಜನ್ ಬಗ್ಗೆ ಮತ್ತಷ್ಟು ವಿವರಣೆ ನೀಡಲಾಗಿದೆ. ಅದರ ಪ್ರಕಾರ : 'ಕ್ರೈಸ್ತ ಮತ್ತು ಇಸ್ಲಾಂ ಹೆಸರುಗಳ ಜೊತೆಗೆ ರಿಲಿಜನ್ ಎಂಬ ಪದವು ಸೇರ್ಪಡೆಯಾಗಿರುವುದನ್ನು ನೀವು ಗಮನಿಸಿರಬಹುದು. ರಿಲಿಜನ್ ಎಂದರೆ ಒಂದಷ್ಟು ನಿಯಮಗಳಿಗೆ ಒಳಪಟ್ಟ ಒಂದು ವ್ಯವಸ್ಥೆ ಎಂದು ಅರ್ಥ.' ಎಂದು ತಿಳಿಸಲಾಗಿದೆ.

'ಒಂದು ಜನಸಮುದಾಯ ಅಥವಾ ಸಂಸ್ಕೃತಿಯು ರಿಲಿಜನ್ ಎಂದು ಕರೆಸಿಕೊಳ್ಳ ಬೇಕಾದರೆ ಅದು (1) ಏಕದೇವನಲ್ಲಿ ನಂಬಿಕೆ ಇಟ್ಟಿರಬೇಕು. (2) ದೇವರ ಸಂದೇಶಗಳನ್ನು ದೇವದೂತನೊಬ್ಬ (ಪ್ರವಾದಿ) ಹೇಳುವನೆಂಬ ವಿಚಾರದಲ್ಲಿ ನಂಬಿಕೆ ಇಟ್ಟಿರಬೇಕು. (3) ಪ್ರವಾದಿಯ ಚಿಂತನೆಗಳನ್ನು ಬರೆದಿಟ್ಟ ಒಂದು ಪವಿತ್ರ ಗ್ರಂಥ ಇರಬೇಕು. (4) ಇಡೀ ಸಮುದಾಯವು ಪ್ರವಾದಿಯಿಂದ ಹೇಳಲ್ಪಟ್ಟ ನಿರ್ದಿಷ್ಟ ವಿಧಿ - ನಿಷೇಧಗಳನ್ನು ಪಾಲಿಸಬೇಕು. (5) ಸಾಮೂಹಿಕ ಪ್ರಾರ್ಥನೆ ಮಾಡಬೇಕು ಹಾಗೂ ಸಾಮೂಹಿಕ ಪ್ರಾರ್ಥನೆ ಮಾಡಲು ಒಂದು ನಿರ್ದಿಷ್ಟ ಸ್ಥಳದಲ್ಲಿ ಸೇರಬೇಕು' ಎಂದು ವಿವರಣೆ ನೀಡಲಾಗಿದೆ.

ಪಾಶ್ಚಾತ್ಯ ರಿಲಿಜನ್‌ಗಳ ದೇವರನ್ನು 'ಗಾಡ್' ಎಂದು ಗುರುತಿಸಲಾಗಿದೆ. ಜೀಸಸ್ ಕ್ರಿಸ್ತರ ಬೋಧನೆಗಳ ಕುರಿತು ತಿಳಿಸುವಾಗ 'ಗಾಡ್' ಹಾಗೂ 'ಬ್ರಹ್ಮ' ಕಲ್ಪನೆ ಬೇರೆ ಬೇರೆ ಎಂದು ಸ್ಪಷ್ಟಪಡಿಸಲಾಗಿದೆ. ಜೀಸಸ್ ಕ್ರಿಸ್ತರ ಬೋಧನೆಗಳಲ್ಲಿ 'ದೇವರನ್ನು ತಂದೆಯ ಸ್ಥಾನದಲ್ಲಿ ಕಲ್ಪಿಸಿಕೊಳ್ಳುವಂತೆ ಬೋಧಿಸಿದರು. ಮಾನವರು ದೇವರ ಮಕ್ಕಳೆಂದು ತಿಳಿಸಿದರು.' ಎಂದು ಹೇಳಲಾಗಿದೆ. ಇಲ್ಲಿ ನೀಡಲಾಗಿರುವ ಮಹತ್ವದ ಸ್ಪಷ್ಟನೆ ಎಂದರೆ, 'ಕ್ರಿಶ್ಚಿಯನ್ನರ ದೇವರನ್ನು 'ಗಾಡ್' ಎನ್ನಲಾಗುತ್ತಿದೆ. ಇದು ಸನಾತನ ಧರ್ಮದ 'ಬ್ರಹ್ಮ' ಪರಿಕಲ್ಪನೆಗಿಂತ ಭಿನ್ನವಾದುದು'.

'ಕ್ರಿಶ್ಚಿಯನ್ನರ ಗಾಡ್' ಹಾಗೂ 'ಸನಾತನ ಧರ್ಮದ ಬ್ರಹ್ಮ' ಎಂಬ ಕಲ್ಪನೆ ಭಿನ್ನ ಎಂದು ಹೇಳಿರುವುದು ಗಮನಾರ್ಹವಾಗಿದೆ. ಕ್ರೈಸ್ತವನ್ನು ರಿಲಿಜನ್ ಎಂದು ಹೇಳತ್ತಲೇ, ಸನಾತನ ಧರ್ಮ ಎಂಬ ಪದ ಬಳಸಲಾಗಿದೆ. ಆ ಮೂಲಕ ರಿಲಿಜನ್ ಹಾಗೂ ಧರ್ಮ ಎರಡೂ ಬೇರೆ ಎಂದು ಸೂಕ್ಷ್ಮವಾಗಿ ಹೇಳಲಾಗಿದೆ.

ಮೊದಲ ಅಧ್ಯಾಯದಲ್ಲಿ ಯಹೂದಿ ರಿಲಿಜನ್‌ನ ಪ್ರವಾದಿ ಮೋಸೆಸ್, ಯಹೂದ್ಯರ ಇತಿಹಾಸ, ಇಸ್ರೇಲ್ ಉದಯ, ಯಹೂದ್ಯರ ಹತ್ತು ಕಟ್ಟಳೆಗಳ ವಿಷಯ ತಿಳಿಸಲಾಗಿದೆ. ಪಾರ್ಸಿ ರಿಲಿಜನ್ ಉದಯ, ಸ್ಥಾಪಕರಾದ ಜರತುಷ್ಟ್ರ, ಪಾರ್ಸಿ ರಿಲಿಜನ್ ನಂಬಿಕೆಗಳ ಕುರಿತು ಪಠ್ಯದಲ್ಲಿ ವಿವರಗಳಿವೆ.

## ರೋಲರ್ ಸ್ಕೇಟಿಂಗ್‌ನಲ್ಲಿ ಪ್ರಥಮ್‌ಗೆ ಪದಕ



ದಾವಣಗೆರೆ, ಮೇ 31- ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿ ನಡೆದ 35ನೇ ರಾಷ್ಟ್ರಮಟ್ಟದ ರೋಲರ್ ರಿಲೇ ಸ್ಕೇಟಿಂಗ್‌ನಲ್ಲಿ ನಗರದ 3ನೇ ತರಗತಿ ವಿದ್ಯಾರ್ಥಿ ಹೆಚ್. ಪ್ರಥಮ್ 8-10 ವರ್ಷ ವಯೋಮಿತಿಯ ರಿಲೇ ಸ್ಕೇಟಿಂಗ್ ವಿಭಾಗದಲ್ಲಿ ಬೆಳ್ಳಿ ಪದಕ ಹಾಗೂ ಸ್ಪೀಡ್ ಸ್ಕೇಟಿಂಗ್‌ನಲ್ಲಿ ಕಂಚಿನ ಪದಕ ಪಡೆದಿದ್ದಾರೆ.

# ಹೊನ್ನಾಳಿ : ನಾಳೆ ಎಲ್‌ಕೆಜಿ, ಯುಕೆಜಿ ಶಿಕ್ಷಕರ ಪ್ರತಿಭಟನೆ



ಹೊನ್ನಾಳಿ, ಮೇ 31 - ಕಳೆದ 6 ವರ್ಷಗಳಿಂದ ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಇದುವರೆಗೂ ಸರ್ಕಾರ ಸೌಲಭ್ಯಗಳನ್ನು ನೀಡದಿರುವುದನ್ನು ಖಂಡಿಸಿ ಜೂನ್ 2ರ ಗುರುವಾರ ಟಿ.ಬಿ. ವೃತ್ತದಿಂದ ತಾಲ್ಲೂಕು ಕಛೇರಿವರೆಗೆ ಪ್ರತಿಭಟನೆ ನಡೆಸಿ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ಸೇವೆ ಸಲ್ಲಿಸಿದವರೊಬ್ಬರಾದ ದೊಡ್ಡೇರಹಳ್ಳಿ ಶಿಕ್ಷಕಿ ಎನ್.ಇ. ಪ್ರಿಯಾಂಕ ಹೇಳಿದರು.

ಪ್ರವಾಸಿ ಮಂದಿರದಲ್ಲಿ ಸಭೆಯನ್ನು ಉದ್ದೇಶಿಸಿ ಮಾತನಾಡಿ, ಹೊನ್ನಾಳಿ ತಾಲ್ಲೂಕು ಶಾಲಾಭಿವೃದ್ಧಿ ಮೇಲುಸ್ತುವಾರಿ ಸಮಿತಿ ಸಹಯೋಗದೊಂದಿಗೆ ಪ್ರತಿಭ ಟನೆ ನಡೆಸಲಾಗುವುದು ಎಂದರು. ಕೆಪಿಎಸ್‌ಸಿ ಶಾಲೆಗಳಿಗಿಂತ ಮುಂಚಿತವಾಗಿ ಎಸ್‌ಡಿಎಂಸಿ ಮೂಲಕ ನಡೆಯುತ್ತಿರುವ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳಿಗೆ ಅನುಮತಿ ನೀ ಡಿದ್ದು, ಈಗಾಗಲೇ ಸರ್ಕಾ ರವೇ ಜಿಲ್ಲೆಯ ಡಯಟ್ ಮೂಲಕ ಒಂದು ವಾರ ತರಬೇತಿ ನೀಡಿ ಪ್ರಮಾಣ ಪತ್ರವನ್ನೂ ನೀಡಿದೆ. ಜಿಲ್ಲೆಯಲ್ಲಿ ಎಸ್‌ಡಿಎಂಸಿ ಸಹಯೋಗದಲ್ಲಿ 150 ಶಿಕ್ಷಕಿಯರು ಕರ್ತವ್ಯ ನಿರ್ಹಹಿಸುತ್ತಿದ್ದು. ಹೊನ್ನಾಳಿ ತಾಲ್ಲೂಕಿನಲ್ಲಿ 43 ಶಾಲೆಗಳಲ್ಲಿ 43 ಶಿಕ್ಷಕಿಯರಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಎಸ್‌ಡಿಎಂಸಿ ರಾಜ್ಯ ಕಾರ್ಯದರ್ಶಿ ರುದ್ರನಾಯ್ಕ, ತಾಲ್ಲೂಕು ಅಧ್ಯಕ್ಷ ಎ.ಎಸ್. ಶಿವಲಿಂಗಪ್ಪ, ಕಾರ್ಯದರ್ಶಿ ಕೆ.ಬಿ.ಸತೀಶ್, ನ್ಯಿಕೋಡು, ಹೊಳೆಹರಳಹಳ್ಳಿ ಸುಭಾಸ್ ಸೇವೆ ಸಲ್ಲಿಸುತ್ತಿರುವ ಶಿಕ್ಷಕಿಯರಾದ ಲಕ್ಷ್ಮೀ, ಬಿ.ಬಿ. ಐಯಾಣಿ, ಕೆ. ಪಿ.ಶಿಲ್ಪ, ನಾಜೀಯಾಬಾನು ಇದ್ದರು.

## ಜೈನ್ ಕಾಲೇಜಿನ ಸಿವಿಲ್ ವಿಭಾಗದ ತಾಂತ್ರಿಕ ಪ್ರವಾಸ




ದಾವಣಗೆರೆ, ಮೇ 31- ನಗರದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಿವಿಲ್ ಇಂಜಿನಿಯರಿಂಗ್ ವಿಭಾಗದಿಂದ ಈಚೆಗೆ ಎರಡು ದಿನಗಳ ತಾಂತ್ರಿಕ ಪ್ರವಾಸ ಆಯೋಜಿಸಲಾಗಿತ್ತು. ವಿಭಾಗದ 150 ವಿದ್ಯಾರ್ಥಿಗಳು ಹಾಗು ಬೋಧಕ ಸಿಬ್ಬಂದಿ ವರ್ಗದವರು ಪ್ರವಾಸಕ್ಕೆ ತೆರಳಿದ್ದರು. ವಿದ್ಯಾರ್ಥಿಗಳು ಎತ್ತಿನಹೊಳೆ ಏತ ನೀರಾವರಿ ಯೋಜನೆ ಹಾಗೂ ಯಗಚಿ ಅಣೆಕಟ್ಟನ್ನು ವೀಕ್ಷಿಸಿ, ನೀರಾವರಿ ಯೋಜನೆಯ ಸಂಪೂರ್ಣ ಮಾಹಿತಿಯನ್ನು ಕಾರ್ಯಪಾಲಕ ಹಾಗು ಸಹಾಯಕ ಕಾರ್ಯಪಾಲಕ ಅಭಿಯಂತರರಿಂದ ಪಡೆದರು.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ : 31.5.2022ರ ಮಂಗಳವಾರ ನಿಧನರಾದ
ಜಿ.ಎಂ ಕೊಟ್ರಯ್ಯ ಇವರ ಪತ್ನಿ ಹಾಗೂ
ಶ್ರೀ ಮುರುಘರಾಜೇಂದ್ರ ಬ್ಯಾಂಕ್ ನಿವೃತ್ತ ನೌಕರರಾದ

**ಶ್ರೀಮತಿ ಹೆಚ್.ಎಸ್. ಮಂಜುಳಾದೇವಿ**

ಇವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತಾ, ಮೃತರ ಆತ್ಮಕ್ಕೆ ಶಾಂತಿ ಕೋರಿ ಮೃತರ ಕುಟುಂಬ ವರ್ಗಕ್ಕೆ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.

**ದಿ. ಹೆಚ್.ಎಸ್. ಕರಿಬಸವಯ್ಯ ದಿ. ಶ್ರೀಮತಿ ದ್ರಾಕ್ಷಾಯಣಮ್ಮ**
ಮತ್ತು ಮಕ್ಕಳು, ಮೊಮ್ಮಕ್ಕಳು.
**ಶ್ರೀ ಶಿವಾನಂದ** ಮಹಾನಗರ ಪಾಲಿಕೆ ಸದಸ್ಯರು 22ನೇ ವಾರ್ಡ್ ದಾವಣಗೆರೆ.
**ಶ್ರೀ ರುದ್ರೇಶ್** ಬಿ.ಜೆ.ಪಿ ಮುಖಂಡರು.
**ಎಸ್.ಜಿ.ಆರ್. ಡಿಜಿಟಲ್ ಹಾಗೂ ಗೆಳೆಯರ ಬಳಗ.**
**ಬೂಸ್ನೂರ್ ನಾಗರಾಜ್ ಹಾಗೂ ಕುಟುಂಬದವರು.**
**ಶಿವಕ್ಕ ಕುಟುಂಬದವರು, ಶಾಮನೂರು.**
**ಶ್ರೀ ರೇಣುಕಾ ಸ್ಟುಡಿಯೋ** ಹೊಂಡದ ಸರ್ಕಲ್, ದಾವಣಗೆರೆ.
**ಶ್ರೀ ಮಲ್ಲಪ್ಪ ನೌಕರಿ ಮತ್ತು ಸಹೋದರರು.**
**ಶ್ರೀ ಶಿವಕುಮಾರ್ ಹಿರೇಮಠ್**
**ಶ್ರೀ ಶಶಿಕುಮಾರ್**, ಪೊಲೀಸ್ ಇಲಾಖೆ, ದಾವಣಗೆರೆ.
**ಶ್ರೀ ಶಿವಾಜಿರಾವ್, ಶ್ರೀ ಬೀರೇಶ್ ಕುಟುಂಬದವರು.**

## ಸುಶೀಲ ತಲ್ವಾರ್ ನಿಧನ



ದಾವಣಗೆರೆ ಎಸ್. ನಿಜಲಿಂಗಪ್ಪ ಬಡಾವಣೆ ವಾಸಿ, ಕರ್ನಾಟಕ ಆಹಾರ ನಿಗಮದ ಜಿಲ್ಲಾ ನಿವೃತ್ತ ವ್ಯವಸ್ಥಾಪಕರಾದ **ಶ್ರೀ ಅಶೋಕ್ ತಲ್ವಾರ್** ಇವರ ಧರ್ಮಪತ್ನಿ

**ಶ್ರೀಮತಿ ಸುಶೀಲ ತಲ್ವಾರ್**

ಅವರು ದಿನಾಂಕ 31.5.2022ರ ಮಂಗಳವಾರ ತಡ ರಾತ್ರಿ 12.35ಕ್ಕೆ ನಿಧನರಾದೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 59 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಮೂವರು ಪುತ್ರಿಯರು ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿ. 01.6.2022ರ ಬುಧವಾರ ಮಧ್ಯಾಹ್ನ 2ಕ್ಕೆ ರಾಣೇಬೆನ್ನೂರು ತಾಲ್ಲೂಕಿನ ಸ್ವಗ್ರಾಮ ಹರನಗಿರಿಯಲ್ಲಿ ನೆರವೇರಲಿದೆ.

ವಿ.ಸೂ : ಮೃತರ ಪಾರ್ಥಿವ ಶರೀರವನ್ನು ದಿನಾಂಕ 01.6.2022ರ ಬುಧವಾರ ಬೆಳಿಗ್ಗೆ 8 ಗಂಟೆಯವರೆಗೆ ದಾವಣಗೆರೆಯ ನಿಜಲಿಂಗಪ್ಪ ಬಡಾವಣೆಯ ನಿವಾಸದಲ್ಲಿ ಇಡಲಾಗುವುದು.

ದುಃಖತಪ್ತ ಕುಟುಂಬ ವರ್ಗ :
**ಅಶೋಕ್ ತಲ್ವಾರ್ ಮತ್ತು ಮಕ್ಕಳು, ಮೊ : 99869 84121, 98453 81940**

## ಕಾನೂನು ಪದವೀಧರರಿಗೆ ತರಬೇತಿ

ದಾವಣಗೆರೆ, ಮೇ 31- ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ ತರಬೇತಿ ನೀಡಲು ಕಾನೂನು ಪದವಿ ಹೊಂದಿದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇಲಾಖೆಯ ವೆಬ್‌ಸೈಟ್ www.tw.kar.nic.in ನಲ್ಲಿ ಜುಲೈ 5 ರವರೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ, ಮೂಲ ಪ್ರತಿಯೊಂದಿಗೆ ಸಂಬಂಧಿಸಿದ ದಾಖಲೆಗಳನ್ನು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಗೆ ಸಲ್ಲಿಸಬಹುದು.

# ಸುಂದರ ಬದುಕು ಕಟ್ಟಿಕೊಳ್ಳಲು ಶಿಕ್ಷಣ ಅಗತ್ಯ: ಸತೀಶ್




**625ಕ್ಕೆ 621 ಅಂಕ ಗಳಿಸಿ ಅತ್ಯುನ್ನತ ಸಾಧನೆ ಮಾಡಿರುವ ಸಿಂಧು ಸನ್ಮಾನ ಸಮಾರಂಭ**

ಹರಿಹರ, ಮೇ 31- ಅರ್ಥಪೂರ್ಣವಾದ ಸುಂದರ ಬದುಕು ಕಟ್ಟಿಕೊಳ್ಳಲು ಶಿಕ್ಷಣ ಅಗತ್ಯ ಎಂದು ಎಂದು ಸಿಪಿಐ ಯು. ಸತೀಶ್‌ಕುಮಾರ್ ಹೇಳಿದರು.

ನಗರದ ಶಿವ ಡಾಬಾ ಸಭಾಂಗಣದಲ್ಲಿ ಶ್ರೀ ಶಿವ ಡಾಬಾ ಗೆಳೆಯರ ಬಳಗದ ವತಿಯಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 621 ಅಂಕ ಗಳಿಸಿ ಅತ್ಯುನ್ನತ ಸಾಧನೆ ಮಾಡಿರುವ ವಿದ್ಯಾರ್ಥಿನಿ ಸಿಂಧು ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಮಾರಂಭದಲ್ಲಿ ಮಾತನಾಡಿದ ಅವರು, ಎಲ್ಲ ಪರೀಕ್ಷೆಗಳಲ್ಲೂ ಮಕ್ಕಳು ಉತ್ತಮ ಅಂಕ ಪಡೆದು ಉತ್ತೀರ್ಣರಾಗಬಹುದು. ಆದರೆ ಜೀವನದಲ್ಲಿ, ಅಂಕಗಳಿಗಿಂತ ಸಂಸ್ಕಾರದ ಮೌಲ್ಯಗಳು ಮುಖ್ಯ, ಶಾಲಾ ಹಂತದಲ್ಲಿಯೇ ಪೋಷಕರು ತಮ್ಮ ಮಕ್ಕಳಿಗೆ ಮೌಲ್ಯಗಳನ್ನು ಕಲಿಸಬೇಕಿದೆ ಎಂದರು.

ಎಸ್‌ಎಸ್‌ಎಲ್‌ಸಿ ನಂತರ ಪಡೆಯುವ ಶಿಕ್ಷಣ ಅತಿ ಮಹತ್ವದಾಗಿರುತ್ತದೆ. ಈ ವಯಸ್ಸಿನಲ್ಲಿ ವಿದ್ಯಾರ್ಥಿಗಳು ವಿವಿಧ ದುಶ್ಚಟಗಳಿಗೆ ಬಲಿಯಾಗುತ್ತಾರೆ. ಜೊತೆಗೆ ಅತಿಯಾದ ಮೊಬೈಲ್ ಬಳಕೆಯು ಇವರ ಜೀವನವನ್ನು ಹಾಳು ಮಾಡಬಹುದು. ಆದ್ದರಿಂದ ಈ ಘಟ್ಟದಲ್ಲಿ ಮಕ್ಕಳ ಚಲನವಲನದ ಬಗ್ಗೆ ಪೋಷಕರು ಹೆಚ್ಚು ಜಾಗೃತಿ ವಹಿಸಬೇಕು ಎಂದು ಕಿವಿಮಾತು ಹೇಳಿದರು.

ಪೌರಾಯುಕ್ತ ಐಗೂರು ಬಸವರಾಜ್ ಮಾತನಾಡಿ, ನಿರಂತರ ಪರಿಶ್ರಮ, ತಂದೆ-ತಾಯಿ ಹಾಗೂ ಶಿಕ್ಷಕರು ನೀಡಿದ ಮಾರ್ಗದರ್ಶನದಿಂದ ಮನಸ್ಸನ್ನು ಕೇಂದ್ರೀಕರಿಸಿಕೊಂಡು ಕಲಿಯುವ ಆಸಕ್ತಿ ಹೊಂದಿದಾಗ ಮಾತ್ರ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಲು ಸಾಧ್ಯ ಎಂದು ಪ್ರತಿಪಾದಿಸಿದರು.

ಮಸ್ತಕ ಸರಿ ಇದ್ದರೆ ಪುಸ್ತಕ ಬರೆಯಬಹುದು ಎಂಬಂತೆ ಯಾರು ಮನಸ್ಸು ಕೊಟ್ಟು ಶಿಕ್ಷಣವನ್ನು ಪಡೆಯುತ್ತಾರೋ ಅವರು ಸಾಧಕರಾಗುತ್ತಾರೆ. ಈ ದಿಸೆಯಲ್ಲಿ ವಿದ್ಯಾರ್ಥಿನಿ ಸಿಂಧು, ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಮುನ್ನಡೆಯಬೇಕು ಎಂದು ಹಾರೈಸಿದರು.

ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್ ಮಾತನಾಡಿ, ಪ್ರಸ್ತುತ ದಿನಮಾನಗಳಲ್ಲಿ ವಿದ್ಯಾರ್ಥಿಗಳು ಸಮಯಕ್ಕೆ ಹೆಚ್ಚು ಬೆಲೆ ಕೊಡದೆ ಅನವಶ್ಯಕವಾಗಿ ಕಾಲಹರಣ ಮಾಡುತ್ತಾರೆ. ಇದರಿಂದ ವಿದ್ಯಾರ್ಥಿ ಜೀವನವೇ ಹಾಳಾಗುವ ಸಾಧ್ಯತೆ ಇದೆ. ಆದ್ದರಿಂದ ವಿದ್ಯಾರ್ಥಿಗಳು ಸಮಯದ ಮಹತ್ವ ಅರಿತು, ಅದರ ಸದ್ಬಳಕೆ ಮಾಡಿಕೊಂಡಾಗ ಮಾತ್ರ ಮುಂದಿನ ಬದುಕು ಹಸನಾಗುತ್ತದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಗೆಳೆಯರ ಬಳಗದ ಮುಖ್ಯಸ್ಥ ಜಗದೀಶ್ ಹಿರೇಮಠ್ ವಹಿಸಿದ್ದರು. ಶಿಕ್ಷಣ ಇಲಾಖೆಯ ಸಂಯೋಜಕ ಮಂಜುನಾಥ್, ಕಾರ್ಮಿಕ ಮುಖಂಡ ಎಚ್.ಕೆ. ಕೊಟ್ರಪ್ಪ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪತ್ರಕರ್ತರಾದ ಶೇಖರಗೌಡ ಪಾಟೀಲ್, ಜಿ.ಕೆ ಪಂಚಾಕ್ಷರಿ, ಕೃಷ್ಣ ರಾಜೋಳಿ, ಗೆಳೆಯರ ಬಳಗದ ಹಾಲೇಶ್ ಹಿರೇಮಠ್, ರಮೇಶ್ ಭಟ್, ಪ್ರದೀಪ್, ರುದ್ರೇಶ್, ಚನ್ನಬಸವ, ಸುಂದರೇಶ್. ಗಿರೀಶ್, ಗಜೇಂದ್ರ, ಮುನ್ನಾ, ರಾಘಣ್ಣ ಹಾಗೂ ವಿದ್ಯಾರ್ಥಿಯ ಪೋಷಕರಾದ ಅಂಗಡಿ ಗಂಗಪ್ಪ, ಶಾಂತಮ್ಮ, ಶಾರದಮ್ಮ, ಶ್ರೀನಿವಾಸ್, ಜ್ಯೋತಿ, ಮಾಲತೇಶ್, ಲತಾ, ಬಾಬಣ್ಣ, ರುದ್ರಪ್ಪ ಬೆಳ್ಳೂಡಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಜಿಲ್ಲೆಯಲ್ಲಿ ಪೆಟ್ರೋಲ್ 'ಖರೀದಿಸದೇ' ಪ್ರತಿಭಟನೆ

## ಹಠಾತ್ ತೆರಿಗೆ ಇಳಿಕೆಯಿಂದ ಪ್ರತಿ ಪಂಪ್‌ಗೆ 10-15 ಲಕ್ಷ ನಷ್ಟ

ದಾವಣಗೆರೆ, ಮೇ 31 - ಪೆಟ್ರೋಲ್ ಹಾಗೂ ಡೀಸೆಲ್ ಮಾರಾಟದ ಕಮೀಷನ್ ಹೆಚ್ಚಿಸುವಂತೆ ಒತ್ತಾಯಿಸಿ ಪೆಟ್ರೋಲ್ ಪಂಪ್ ಮಾಲೀಕರು ಮಂಗಳವಾರದಂದು ಪ್ರತಿಭಟನೆ ನಡೆಸಿದ್ದಾರೆ.

ತೈಲ ಮಾರಾಟ ಕಂಪನಿಗಳಿಂದ ಪೆಟ್ರೋಲ್ ಹಾಗೂ ಡೀಸೆಲ್ ಖರೀದಿಗಾಗಿ ಒಂದು ದಿನದ ಮಟ್ಟಿಗೆ ಯಾವುದೇ ಆದೇಶ ಹೊರಡಿಸದ ರೂಪದಲ್ಲಿ ಪ್ರತಿಭಟನೆ ನಡೆಸಲಾಗಿದೆ. ಆದರೆ, ಪೆಟ್ರೋಲ್ ಹಾಗೂ ಡೀಸೆಲ್ ಮಾರಾಟ ಎಂದಿನಂತೆಯೇ ನಡೆದಿತ್ತು.ಕರ್ನಾಟಕ ಸೇರಿದಂತೆ 24 ರಾಜ್ಯಗಳ ಪೆಟ್ರೋಲ್ ಪಂಪ್ ಮಾಲೀಕರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು. ಪ್ರಸಕ್ತ ಪ್ರತಿ ಲೀಟರ್ ಪೆಟ್ರೋಲ್‌ಗೆ 2.90 ರೂ. ಹಾಗೂ ಡೀಸೆಲ್‌ಗೆ 1.85 ರೂ.ಗಳ ಕಮೀಷನ್ ನೀಡಲಾಗುತ್ತಿದೆ.

ಈ ಬಗ್ಗೆ ಪತ್ರಿಕೆಯೊಂದಿಗೆ ಮಾತನಾಡಿರುವ ದಾವಣಗೆರೆ ಜಿಲ್ಲಾ ಪೆಟ್ರೋಲ್ ಡೀಲರ್‌ಗಳ ಒಕ್ಕೂಟದ ಅಧ್ಯಕ್ಷ ಅಜ್ಜಂಪುರ ಶೆಟ್ರು ಶಂಭುಲಿಂಗಪ್ಪ, ನಿಯಮಿತವಾಗಿ ಕಮೀಷನ್ ಹೆಚ್ಚಿಸಲಾಗುವುದು ಎಂದು ಸರ್ಕಾರ ತಿಳಿಸಿತ್ತು. ಆದರೆ, ಕಳೆದ ಮೂರು ವರ್ಷಗಳಿಂದಲೂ ಕಮೀಷನ್ ಹೆಚ್ಚಿಸಿಲ್ಲ ಎಂದಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಪೆಟ್ರೋಲ್ ಪಂಪ್‌ಗಳ ನಿರ್ವಹಣಾ ವೆಚ್ಚ ಹೆಚ್ಚಾಗಿದೆ. ಕಾರ್ಮಿಕರ ವೇತನ, ವಿದ್ಯುತ್ ದರ ಸೇರಿದಂತೆ ಹೊರೆ ಹೆಚ್ಚಾಗಿದೆ. ಆದರೆ, ಕಮೀಷನ್ ಮಾತ್ರ ಹೆಚ್ಚಿಸಿಲ್ಲ ಎಂದವರು ದೂರಿದ್ದಾರೆ.

ಅಲ್ಲದೇ, ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಅಬಕಾರಿ ತೆರಿಗೆಯನ್ನು ಕೇಂದ್ರ ಸರ್ಕಾರ ಒಂದೇ ಬಾರಿಗೆ ಭಾರೀ ಪ್ರಮಾಣದಲ್ಲಿ ಇಳಿಸಿದೆ. ಇದರಿಂದಾಗಿ ಪೆಟ್ರೋಲ್ ಪಂಪ್ ಮಾಲೀಕರಿಗೆ ನಷ್ಟವಾಗಿದೆ. ಕಳೆದ ಬಾರಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ತೆರಿಗೆ ಇಳಿಸಿದ್ದವು. ಈ ಬಾರಿ ಕೇಂದ್ರ ಸರ್ಕಾರ ಇಳಿಕೆ ಮಾಡಿದೆ. ಈ ಕ್ರಮಗಳಿಂದ ಪೆಟ್ರೋಲ್ ಪಂಪ್ ಮಾಲೀಕರಿಗೆ 10-15 ಲಕ್ಷ ರೂ.ಗಳವರೆಗೆ ನಷ್ಟವಾಗಿದೆ ಎಂದವರು ಹೇಳಿದ್ದಾರೆ.

ಸರ್ಕಾರ ತೆರಿಗೆ ಹೆಚ್ಚಿಸುವಾಗ ಅಲ್ಪ ಪ್ರಮಾಣದಲ್ಲಿ ಹೆಚ್ಚಿಸುತ್ತದೆ. ಆದರೆ, ಇಳಿಕೆ ಮಾಡುವಾಗ ಭಾರೀ ಪ್ರಮಾಣಕ್ಕೆ ಮುಂದಾಗುತ್ತದೆ. ಇಂತಹ ಸಂದರ್ಭದಲ್ಲಿ ನಾವು ಹೆಚ್ಚಿನ ತೆರಿಗೆ ಪಾವತಿಸುತ್ತೇವೆ. ಆದರೆ, ಕಡಿಮೆ ತೆರಿಗೆ ವಸೂಲಿ ಮಾಡುತ್ತೇವೆ. ಬಾಕಿ ಹಣ ಡೀಲರ್‌ಗಳಿಗೆ ಹೊರೆ ಎಂದವರು ತಿಳಿಸಿದ್ದಾರೆ.

ಕೇವಲ ಒಂದು ದಿನ ಮಾತ್ರ ಪೆಟ್ರೋಲ್ ಹಾಗೂ ಡೀಸೆಲ್ ಖರೀದಿ ನಿಲ್ಲಿಸಿದ್ದೇವೆ. ಮಾರಾಟ ಮುಂದುವರೆದಿದೆ. ನಿನ್ನೆ ರಾತ್ರಿ ಹಾಗೂ ಇಂದು ಟ್ಯಾಂಕ್‌ನಲ್ಲಿ ಬಂದ ಪೆಟ್ರೋಲ್ ಪಡೆಯುತ್ತಿದ್ದೇವೆ. ಹೊಸದಾಗಿ ಯಾವುದೇ ಆರ್ಡರ್ ಕಂಪನಿಗೆ ಕಳಿಸುತ್ತಿಲ್ಲ ಎಂದವರು ಸ್ಪಷ್ಟಪಡಿಸಿದ್ದಾರೆ.

ಮೂರ್ನಾಲ್ಕು ದಿನಗಳ ಕಾಲ ಪೆಟ್ರೋಲ್ ಹಾಗೂ ಡೀಸೆಲ್ ಮಾರಾಟ ಇರುವುದಿಲ್ಲ ಎಂದು ನಿನ್ನೆ ಜಾಲತಾಣಗಳ ಮೂಲಕ ಹರಿದಾಡಿದ ಗಾಳಿ ಸುದ್ದಿಯ ಪ್ರಭಾವ ಮಂಗಳವಾರವೂ ಮುಂದುವರೆದಿತ್ತು. ಸಾಮಾನ್ಯಕ್ಕಿಂತ ಹೆಚ್ಚಿನ ಪ್ರಮಾಣದ ಜನರು ಪಂಪ್‌ಗಳಲ್ಲಿ ಪೆಟ್ರೋಲ್ ತುಂಬಿಸಿಕೊಳ್ಳುತ್ತಿದ್ದುದು ಕಂಡು ಬಂತು.

# ಸೋನಿಯಾ ಸಮ್ಮತಿ ನಂತರವೇ ಕುಪೇಂದ್ರ ರೆಡ್ಡಿ ಕಣಕ್ಕೆ: ಜೆಡಿಎಸ್

ಬೆಂಗಳೂರು, ಮೇ 31 - ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ಪಕ್ಷದ ಇತರೆ ಮುಖಂಡರಿಂದ ಬೆಂಬಲದ ಒಪ್ಪಿಗೆ ದೊರೆತ ನಂತರ ಮಾಜಿ ಸಂಸದ ಡಿ. ಕುಪೇಂದ್ರ ರೆಡ್ಡಿ ಅವರನ್ನು ರಾಜ್ಯಸಭಾ ಚುನಾವಣೆಗೆ ಕಣಕ್ಕಿಳಿಸಲಾಗಿದೆ ಎಂದು ಜೆಡಿಎಸ್ ಹೇಳಿದೆ.

ಸೋನಿಯಾ ಗಾಂಧಿ ಸಮ್ಮತಿಸಿದ ನಂತರವೇ ಜೆಡಿಎಸ್ ಅಭ್ಯರ್ಥಿಯಾಗಿ ಕುಪೇಂದ್ರ ರೆಡ್ಡಿ ಆಯ್ಕೆ ಮಾಡಲಾಗಿದೆ. ಕಾಂಗ್ರೆಸ್ ಪಕ್ಷ ದಿಢೀರನೆ ಎರಡನೇ ಅಭ್ಯರ್ಥಿ ಕಣಕ್ಕಿಳಿಸಿರುವುದು ಅಚ್ಚರಿ ತಂದಿದೆ ಎಂದು ಜೆಡಿಎಸ್ ಹಿರಿಯ ಮುಖಂಡ ಹೆಚ್. ಡಿ. ರೇವಣ್ಣ ಹೇಳಿದ್ದಾರೆ.

ರಾಜ್ಯಸಭಾ ಚುನಾವಣೆಯಲ್ಲಿ ಕೋಮುವಾದಿ ಪಕ್ಷವನ್ನು ದೂರವಿಡಲು ತಮ್ಮ ಪಕ್ಷದ ಅಭ್ಯರ್ಥಿಯನ್ನು ಬೆಂಬಲಿಸುವಂತೆಯೂ ಅವರು ಕಾಂಗ್ರೆಸ್ ಶಾಸಕರ ಬಳಿ ಮನವಿ ಮಾಡಿದ್ದಾರೆ.

ಶುಕ್ರವಾರ ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡ ಅವರೊಂದಿಗೆ ಸೋನಿಯಾ ಗಾಂಧಿ ಮಾತನಾಡಿದ್ದಾರೆ. ಇದೇ ರೀತಿಯಲ್ಲಿ ಹೆಚ್.ಡಿ. ಕುಮಾರಸ್ವಾಮಿ ಅವರು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣು ಗೋಪಾಲ್ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ. ಅವರು ಒಪ್ಪಿಗೆ ನೀಡಿದ ನಂತರ ನಾವು ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದೇವೆ ಎಂದು ರೇವಣ್ಣ ಹೇಳಿದರು.

ಜೂನ್ 10 ರಂದು ನಡೆಯಲಿರುವ ರಾಜ್ಯಸಭೆಯ ನಾಲ್ಕು ಸ್ಥಾನಗಳ ಚುನಾವಣೆಯಲ್ಲಿ ವಿಧಾನಸಭೆಯಲ್ಲಿ ಹೆಚ್ಚಿನ ಶಾಸಕರನ್ನು ಹೊಂದಿರುವ ಬಿಜೆಪಿ ಎರಡು, ಕಾಂಗ್ರೆಸ್ ಒಂದು ಸ್ಥಾನವನ್ನು ಸುಲಭವಾಗಿ ಗೆಲ್ಲಬಹುದಾಗಿದೆ. ರಾಷ್ಟ್ರೀಯ ಪಕ್ಷಗಳು ಬೆಂಬಲ ನೀಡಿದರೆ ಮಾತ್ರ ಜೆಡಿಎಸ್ ಇನ್ನೊಂದು ಸ್ಥಾನ ಪಡೆಯಬಹುದು.

# ಸಮ್ಮಾನ್ ಯೋಜನೆ ಕಂತು ಬಿಡುಗಡೆ



**(1ನೇ ಪುಟದಿಂದ)** ಸದಸ್ಯನಾಗಿದ್ದೇನೆ ಎಂದರು. ನಾವೆಲ್ಲರೂ ಜೊತೆಗೂಡಿ ಭಾರತವನ್ನು ಇಡೀ ವಿಶ್ವದಲ್ಲಿ ಉನ್ನತ ಸ್ಥಾನಕ್ಕೆ ಕೊಂಡೊಯ್ಯಲು ಪ್ರಯತ್ನಿಸೋಣ. ಇಂದು ದೇಶದ 10 ಕೋಟಿಗೂ ಹೆಚ್ಚಿನ ರೈತರಿಗೆ ಕಿಸಾನ್ ಸಮ್ಮಾನ್ ಯೋಜನೆಯಡಿ ಸಹಾಯಧನವನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ ಎಂದರು.

ದೇಶದಲ್ಲಿ ಭ್ರಷ್ಟಾಚಾರ ತೊಲಗಿಸುವ ಉದ್ದೇಶದಿಂದ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಡಿಬಿಟಿ ಮೂಲಕ ನೇರವಾಗಿ ಅವರ ಖಾತೆಗೆ ಹಣ ಪಾವತಿಸುವ ಪ್ರಕ್ರಿಯೆ ಜಾರಿಗೆ ತರಲಾಗಿದೆ. ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಸ್ಥಳೀಯ ಭಾಷೆಯಲ್ಲಿ ಶಿಕ್ಷಣ ನೀಡುವ ಮೂಲಕ ಇಂಗ್ಲಿಷ್ ದಾಸ್ಯದಿಂದ ಹೊರ ಬರಲು ಉತ್ತೇಜನ ನೀಡಲಾಗುತ್ತಿದೆ ಎಂದು ಹೇಳಿದರು.

ಕೊರೊನಾದಿಂದ ಪೋಷಕರನ್ನು ಕಳೆದುಕೊಂಡ ಮಕ್ಕಳಿಗೆ ಪಿಎಂ ಕೇರ್ಸ್ ಫಾರ್ ಚಿಲ್ಡ್ರನ್ ಯೋಜನೆಯ ಮೂಲಕ ವಿವಿಧ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಜಿ.ಎಂ ಸಿದ್ದೇಶ್ವರ, ಶಾಸಕರಾದ ಎಸ್.ಎ ರವೀಂದ್ರನಾಥ್, ಪ್ರೊ. ಲಿಂಗಣ್ಣ, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್ ಶಿವಯೋಗಿಸ್ವಾಮಿ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ ರಿಷ್ಯಂತ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎ.ಚನ್ನಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದು ವರ್ಚ್ಯುಯಲ್ ಕಾರ್ಯಕ್ರಮವನ್ನು ವೀಕ್ಷಿಸಿದರು.

# ನೇರ ನೆರವಿನಿಂದ ಭ್ರಷ್ಟಾಚಾರಕ್ಕೆ ಅವಕಾಶ ಇಲ್ಲ

**ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜುಗಳ ಸ್ಥಾಪನೆ**

ಶಿಮ್ಲಾ, ಮೇ 31 – 2014ಕ್ಕೆ ಮುಂಚೆ ಭ್ರಷ್ಟಾಚಾರ ಆಡಳಿತದ ಭಾಗದಂತಾಗಿತ್ತು. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಭ್ರಷ್ಟಾಚಾರವನ್ನು ಎಳ್ಳಷ್ಟೂ ಸಹಿಸದೇ ಎಂಟು ವರ್ಷಗಳಲ್ಲಿ ಅಪಾರ ಬದಲಾವಣೆಯಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಪ್ರಧಾನ ಮಂತ್ರಿಯಾಗಿ ಎಂಟು ವರ್ಷ ತುಂಬಿದ ಸಂದರ್ಭದಲ್ಲಿ ಶಿಮ್ಲಾದ ರಿಡ್ಜ್ ಮೈದಾನದಲ್ಲಿ ಆಯೋಜಿಸಲಾಗಿದ್ದ ಸಮಾವೇಶದಲ್ಲಿ ಮಾತನಾಡುತ್ತಿದ್ದ ಅವರು, 2014ರ ಮುಂಚಿನ ದಿನಗಳಿಗಿಂತ ಈಗ ಗಡಿಗಳು ಹೆಚ್ಚು ಸುರಕ್ಷಿತವಾಗಿವೆ ಎಂದಿದ್ದಾರೆ.

ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ವಿವಿಧ ಯೋಜನೆಗಳಿಂದ 9 ಕೋಟಿ ನಕಲಿ ಫಲಾನುಭವಿಗಳನ್ನು ಹೊರ ಹಾಕಲಾಗಿದೆ. ಫಲಾನುಭವಿಗಳಿಗೆ ನೇರವಾಗಿ ನೆರವು ಕಲ್ಪಿಸುವ ಮೂಲಕ ಭ್ರಷ್ಟಾಚಾರದ ಅವಕಾಶ ತೆಗೆದು ಹಾಕಿರುವುದಾಗಿ ಮೋದಿ ಹೇಳಿದ್ದಾರೆ.

200 ಕೋಟಿ ಡೋಸ್ ಕೊರೊನಾ ಲಸಿಕೆ ನೀಡಿರುವುದನ್ನು ಪ್ರಸ್ತಾಪಿಸಿದ ಪ್ರಧಾನಿ, ಮುಂದಿನ ದಿನಗಳಲ್ಲಿ ದೇಶದ ಪ್ರತಿಯೊಂದು ಜಿಲ್ಲೆಯಲ್ಲೂ ಒಂದು ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸುವುದಾಗಿ ತಿಳಿಸಿದ್ದಾರೆ.



ಸಮಾವೇಶಕ್ಕೂ ಮುಂಚೆ ಕೇಂದ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳ ಜೊತೆ ಆನ್‌ಲೈನ್ ಮೂಲಕ ಸಂವಾದ ನಡೆಸಿದ ಪ್ರಧಾನಿ, 21 ಸಾವಿರ ಕೋಟಿ ರೂ. ಗಳನ್ನು ಕಿಸಾನ್ ಸಮ್ಮಾನ್ ನಿಧಿಯ 11ನೇ ಕಂತಾಗಿ ಬಿಡುಗಡೆ ಮಾಡಿದರು.

# ಆರ್ಥಿಕ ಬೆಳವಣಿಗೆ ಶೇ.4.1ಕ್ಕೆ ಕುಸಿತ

ನವದೆಹಲಿ, ಮೇ 31 – ಉಕ್ರೇನ್ ಸಮರದ ಕಾರಣದಿಂದಾಗಿ ದೇಶದ ಆರ್ಥಿಕ ಬೆಳವಣಿಗೆ ವೇಗ ಕುಂಠಿತವಾಗಿದ್ದು, 2021-22ರ ಕೊನೆಯ ಚತುರ್ಥದಲ್ಲಿ ಶೇ.4.1ರ ಬೆಳವಣಿಗೆಯಾಗಿದೆ. ಇಡೀ ವರ್ಷದ ಬೆಳವಣಿಗೆ ಪ್ರಮಾಣ ಶೇ.8.7 ರಷ್ಟಿದೆ. ವಾರ್ಷಿಕ ಬೆಳವಣಿಗೆ ದರ ಕಳೆದ 22 ವರ್ಷಗಳಲ್ಲೇ ಅತಿ ಹೆಚ್ಚಾಗಿದೆ. ಆದರೆ, ಕೊನೆಯ ಚತುರ್ಥದಲ್ಲಿ ಹಣದುಬ್ಬರ ಹೊಸ ಸಮಸ್ಯೆಯನ್ನು ತಂದಿದೆ. 2021-22ರ ಸಾಲಿನಲ್ಲಿ ಶೇ.8.9ರ ಬೆಳವಣಿಗೆಯ ಅಂದಾಜಿತ್ತು. ಆದರೆ, ಕೊನೆಯ ತಿಂಗಳುಗಳಲ್ಲಿ ಬೆಳವಣಿಗೆ ಕುಂಠಿತವಾಗಿದೆ. 2020-21ರ ಸಾಲಿನಲ್ಲಿ ಆರ್ಥಿಕತೆ ಶೇ.6.6ರಷ್ಟು ಕುಸಿತವಾಗಿತ್ತು.

ಜಾಗತಿಕವಾಗಿ ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ 120 ಡಾಲರ್‌ಗಳಿಗೆ ಮರಳಿದೆ. ಇದರಿಂದಾಗಿ ಪ್ರಸಕ್ತ ಹಣಕಾಸು ವರ್ಷದ ಮುಂದಿನ ದಿನಗಳಲ್ಲಿ ಆರ್ಥಿಕ ಪರಿಸ್ಥಿತಿ ಕಠಿಣವಾಗಲಿದೆ. ಹೆಚ್ಚಿನ ಹಣದುಬ್ಬರದ ಕಾರಣದಿಂದಾಗಿ ರಿಸರ್ವ್ ಬ್ಯಾಂಕ್ ಈಗಾಗಲೇ ಬಡ್ಡಿ ದರ ಹೆಚ್ಚಿಸಿದೆ. ಜೂನ್ 8ರಂದು ನಡೆಯಲಿರುವ ಸಭೆಯಲ್ಲಿ ಇನ್ನೊಂದು ಸುತ್ತು ಬಡ್ಡಿ ದರ ಹೆಚ್ಚಳದ ಸಾಧ್ಯತೆ ಇದೆ.

# ಲತಾ- ಕವಿತಾ

**(1ನೇ ಪುಟದಿಂದ)** ಗಂಭೀರವಾಗಿ ಪರಿಗಣಿಸಿ, ಹೊನ್ನಾಳಿ ವಿಧಾನಸಭಾ ಕ್ಷೇತ್ರದ ಚುನಾವಣಾ ಉಸ್ತುವಾರಿಯಾಗಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹಾಗೂ ಹರಪನಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಕವಿತಾ ರೆಡ್ಡಿ ಅವರನ್ನು ನೇಮಕ ಮಾಡಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆದೇಶಿಸಿದ್ದಾರೆ.


# ಸಮಸ್ಯೆ ಇಳಿಕೆ

**(1ನೇ ಪುಟದಿಂದ)** ಯಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಈ ಅವಧಿಯಲ್ಲಿ 17.65 ಲಕ್ಷ ಕೋಟಿ ರೂ.ಗಳ ತೆರಿಗೆಯ ನಿರೀಕ್ಷೆ ಇತ್ತು. ನಿರೀಕ್ಷೆಗೂ ಹೆಚ್ಚಿನ 18.2 ಲಕ್ಷ ಕೋಟಿ ರೂ.ಗಳ ತೆರಿಗೆ ಸಂಗ್ರಹವಾಗಿದೆ.


ಸಾಧನೆಗೆ ಅಭಿನಂದನೆಗಳು



ಈ ಬಾರಿ ನಡೆದ ಯುಪಿಎಸ್‌ಸಿ ಪರೀಕ್ಷೆಯಲ್ಲಿ ದೇಶಕ್ಕೆ 31ನೇ ರ್‍ಯಾಂಕ್ ಮತ್ತು ಕರ್ನಾಟಕಕ್ಕೆ ಮೊದಲ ರ್‍ಯಾಂಕ್ ಪಡೆದುಕೊಂಡಿರುವ ದಾವಣಗೆರೆಯ ಪ್ರಸಿದ್ಧ ಹೋಟೆಲ್ ಉದ್ದಿಮೆದಾರರಾದ
ಶ್ರೀ ಕೆ.ವಿ. ಆನಂದ ರಾವ್
ಅವರ ಮೊಮ್ಮಗ ಹಾಗೂ
ಶ್ರೀ ಕೆ.ಎ.ವಿಠ್ಠಲ್ ರಾವ್ ಮತ್ತು ಶ್ರೀಮತಿ ಸ್ಮಿತಾ ರಾವ್ ಅವರ ಪುತ್ರನಾದ
ಚಿ|| ಅವಿನಾಶ್ ರಾವ್
ಅವರಿಗೆ ಹಾರ್ದಿಕ ಅಭಿನಂದನೆಗಳು.
ಕೆ. ಸಚಿನ್ ಆಚಾರ್ಯ ಮತ್ತು ಕುಟುಂಬದವರು
ಎ.ಕೆ.ಫಾರ್ಮ, ದಾವಣಗೆರೆ





ಜನ್ಮದಿನದ ಶುಭಾಷಯಗಳು
ಡಾ|| ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ ಸನ್ಮಾನ್ಯ
ಶ್ರೀ ಪ್ರೊ. ಎನ್. ಲಿಂಗಣ್ಣ
ಅವರಿಗೆ ಜನ್ಮದಿನದ ಶುಭಾಶಯಗಳು
ಶುಭ ಕೋರುವವರು
ಹುಲಗೇಶಿ ಹೆಚ್.
ಸಾಮಾಜಿಕ ಕಾರ್ಯಕರ್ತರು, ದಾವಣಗೆರೆ


ಶ್ರೀ ಸಾಯಿ ಕ್ರೆಡಿಟ್ ಕೋ ಆಪ್ ಸೊಸೈಟಿ ಲಿ., ದಾವಣಗೆರೆ.
2022 ರಿಂದ 2027ರ ವರೆಗಿನ 5ಗಳ ವರ್ಷದ ಅವಧಿಗೆ ಆಯ್ಕೆಯಾದ ಆಡಳಿತ ಮಂಡಳಿ ನಿರ್ದೇಶಕರುಗಳು



ಸವಿತಾ ಪ್ರಕಾಶ್ ಎಂ.
ಸಂಸ್ಥಾಪಕರು
(ಸಾಮಾನ್ಯ)



ಎನ್.ಎಸ್ ರೇವಣ್ಣಸಿದ್ದಪ್ಪ
Rtd P.S.I
(ಸಾಮಾನ್ಯ)


ರುದ್ರಪ್ಪ ಬಸಪ್ಪ
ಪೊಲೀಸ್ ಗೌಡರು
(ಸಾಮಾನ್ಯ)


ಬಿ.ಕೆ. ಬಸಪ್ಪ
(ಸಾಮಾನ್ಯ)


ಅಣಜಿ ಈ. ನಾಗರಾಜ್
(ಸಾಮಾನ್ಯ)


ಬಿ.ಎನ್. ಶಿವಣ್ಣಾಚಾರ್
(ಸಾಮಾನ್ಯ)


ಶ್ರೀ ಮಾವು ಶೆಟ್ಟರ್
(ಸಾಮಾನ್ಯ)


ಕೆ.ಜಿ. ಮಧುಕುಮಾರ್
ಸಾಮಾನ್ಯ


ಮಹಮದ್ ದಸ್ತಗಿರಿ,
(ವಕೀಲರು), (ಪ್ರವರ್ಗ ಬಿ)


ಶ್ರೀಮತಿ ಶಶಿಕಲಾ
(ಮಹಿಳಾ ಮೀಸಲು)


ಮಂಜುಳ ಎನ್.ಜೆ.
(ಮಹಿಳಾ ಮೀಸಲು)


ಶ್ರೀ ವೀರಕುಮಾರ್
Rtd. AEE, (ಪರಿಶಿಷ್ಟ ಜಾತಿ)


ಟಿ. ರಂಗಪ್ಪ
(ಪರಿಶಿಷ್ಟ ಪಂಗಡ)

ಬಿ.ಹೆಚ್. ಗುಡ್ಡಾಚಾರ್

# ಬಸವಣ್ಣ ಪಾಠ ಪರಿಷ್ಕರಣೆಗೆ ಸಾಣೇಹಳ್ಳಿ ಶ್ರೀಗಳ ಆಕ್ಷೇಪ

(1ನೇ ಪುಟದಿಂದ) ಹಾಗೂ ಅವರ ಅನುಯಾಯಿಗಳಾದ ಶರಣರು ಪ್ರಚಾರಪಡಿಸಿದರು' ಎಂಬ ಅಂಶವನ್ನು ತೆಗೆದು ಹಾಕಲಾಗಿದೆ.

'ಜಾತಿ ವ್ಯವಸ್ಥೆಯ ಕಡು ವಿರೋಧಿಯಾಗಿದ್ದ ಬಸವೇಶ್ವರರು ತಮ್ಮ ಉಪನಯನದ ನಂತರ ಯಜ್ಞೋಪವೀತವನ್ನು ಕಿತ್ತೆಸೆದು ಕೂಡಲಸಂಗಮಕ್ಕೆ ನಡೆದರು. ಉನ್ನತಾಧಿಕಾರದಲ್ಲಿದ್ದರೂ ಹಣ, ಅಧಿಕಾರ, ಅಧಿಪತ್ಯ ಇವ್ಯಾವುದರಿಂದಲೂ ಇವರು ವಿಚಲಿತರಾಗಲಿಲ್ಲ. ತಮ್ಮ ಇಡೀ ಜೀವನವನ್ನು ಸಮಾಜ ಮತ್ತು ಧರ್ಮದಲ್ಲಿನ ಅನಿಷ್ಟ ಪದ್ಧತಿಗಳನ್ನು ತೊಡೆದುಹಾಕಲು ಮೀಸಲಿರಿಸಿದರು.' ಎಂಬ ಅಂಶವೂ ಪರಿಷ್ಕೃತ ಪಠ್ಯದಲ್ಲಿ ಇಲ್ಲ.

ಸ್ವಾವಲಂಬನೆಯ ತತ್ವ, ದೇಹವೇ ದೇಗುಲ – ಈ ಸಂವೇದನೆಗಳು ಇಂದಿಗೂ ನಮ್ಮ ಸಮಾಜಕ್ಕೆ ದಾರಿ ದೀಪಗಳಾಗಿವೆ. ಅವರು ಸರಳ ಕನ್ನಡವನ್ನು ಬಳಸುವ ಮೂಲಕ ತಮ್ಮ ಚಳುವಳಿಯನ್ನು ಜನಮುಖಿಯಾಗಿಸಿದರು ಎಂಬ ಅನೇಕ ಮಹತ್ವದ ಅಂಶಗಳನ್ನು ತೆಗೆದು ಹಾಕಿ ತಮಗೆ ಬೇಕಾದಂತೆ ತಿರುಚಿದ್ದಾರೆ ಎಂದು ಸಾಣೇಹಳ್ಳಿ ಶ್ರೀಗಳು ಹೇಳಿದ್ದಾರೆ.

ಬಸವಣ್ಣನವರ ಮತ್ತು ಅವರು ಪ್ರತಿಪಾದಿಸಿದ ಲಿಂಗಾಯತ ಧರ್ಮದ ಬಗ್ಗೆ ತಪ್ಪು ಅಭಿಪ್ರಾಯ ಬರುವಂತೆ ಮಾಡಿದ್ದಾರೆ. ಈ ಬದಲಾವಣೆ ನಿಜಕ್ಕೂ ಖಂಡನಾರ್ಹ ಎಂದು ಶ್ರೀಗಳು ತಿಳಿಸಿದ್ದಾರೆ.

'ವಚನಕಾರರು ವೀರಶೈವ ಮತವನ್ನು ಸುಧಾರಿಸಿದವರು' ಎನ್ನುವುದು ಶುದ್ಧ ಸುಳ್ಳು. ಅವರು 'ಲಿಂಗಾಯತ ಧರ್ಮವನ್ನು ಜಾರಿಯಲ್ಲಿ ತಂದರು' ಎಂದಾಗಬೇಕಿತ್ತು. ಇಂತಹ ಹಲವು ದೋಷಗಳಾಗಿವೆ ಎಂದು ಶ್ರೀಗಳು ಹೇಳಿದ್ದಾರೆ.

ತಕ್ಷಣ ಇಡೀ ಪಠ್ಯವನ್ನೇ ತಡೆ ಹಿಡಿದು ಎಲ್ಲಿಯೂ ದೋಷವಾಗದಂತೆ ಪರಿಷ್ಕರಣೆ ಮಾಡಬೇಕು. ಇಲ್ಲವೇ ಹಿಂದಿನ ಪಠ್ಯವನ್ನೇ ಮುಂದುವರೆಸಬೇಕು. ಈ ಬಗ್ಗೆ ಕೂಡಲೇ ಕ್ರಮ ಜರುಗಿಸದಿದ್ದರೆ ನಾಡಿನಾದ್ಯಂತ ಹೋರಾಟ ನಡೆಯುವುದು ಅನಿವಾರ್ಯವಾಗ ಬಹುದು ಎಂದೂ ಅವರು ಎಚ್ಚರಿಸಿದ್ದಾರೆ.

## ಬಸವಣ್ಣನವರ ಪರಿಷ್ಕರಣೆ ಸಾಲು ನೋಡಿ ಎದೆಗೆ ಕಲ್ಲು ಹೊಡೆದ ಹಾಗಾಗಿದೆ

**ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ**

ಹುಬ್ಬಳ್ಳಿ, ಮೇ 31 - ಪಠ್ಯ ಪುಸ್ತಕದಲ್ಲಿ ಬಸವಣ್ಣನವರ ಬಗ್ಗೆ ಇರುವ ಮಾಹಿತಿ ಪರಿಷ್ಕರಣೆ ಮಾಡಿದ್ದ ಸಾಲು ನೋಡಿ ಎದೆಗೆ ಕಲ್ಲು ಹೊಡೆದ ಹಾಗಾಯಿತು ಎಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುವೆಂಪು ಹಾಗೂ ಬಸವಣ್ಣನರ ತತ್ವಕ್ಕೆ ಅಪಚಾರವಾಗುವಂಥ ಕೆಲಸ ನಡೆಯುತ್ತಿದೆ. ಸೈದ್ಧಾಂತಿಕ ವಿಚಾರಕ್ಕೆ ಯಾರೂ ಕೈ ಹಾಕಬೇಡಿ. ಅವರ ಸಂದೇಶಗಳನ್ನು ಮಕ್ಕಳಿಗೆ ನೀಡುವಂತಾಗಬೇಕು. ಅದನ್ನು ಬಿಟ್ಟು ಬಸವಣ್ಣನವರ ಮೂಲ ಉದ್ದೇಶವನ್ನೇ ದಾರಿ ತಪ್ಪಿಸುವಂತಾಗಬಾರದು ಎಂದಿದ್ದಾರೆ.

## ಪ್ರಧಾನ ಮಂತ್ರಿ ಜೀವನ್ ಜ್ಯೋತಿ, ಸುರಕ್ಷಾ ಬಿಮಾಗಳ ಕಂತು ಹೆಚ್ಚಳ

ನವದೆಹಲಿ, ಮೇ 31 – ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನಾ (ಪಿ.ಎಂ.ಜೆ.ಜೆ.ಬಿ.ವೈ.) ಹಾಗೂ ಪ್ರಧಾನ ಮಂತ್ರಿ ಸುರಕ್ಷಾ ಬಿಮಾ (ಪಿಎಂಎಸ್‌ಬಿವೈ) ಯೋಜನೆಗಳ ಕಂತುಗಳನ್ನು ಕೇಂದ್ರ ಸರ್ಕಾರ ಹೆಚ್ಚಿಸಿದೆ. ಪಿಎಂಜೆಜೆಬಿವೈ ಕಂತನ್ನು ಈಗಿರುವ ವಾರ್ಷಿಕ 330 ರೂ.ಗಳಿಂದ 436 ರೂ.ಗಳಿಗೆ ಹೆಚ್ಚಿಸಲಾಗಿದೆ. ಪಿಎಂಎಸ್‌ಬಿವೈ ಯೋಜನೆಯ ಕಂತನ್ನು ಈಗಿರುವ 12 ರೂ.ಗಳಿಂದ 20 ರೂ.ಗಳಿಗೆ ಹೆಚ್ಚಿಸಲಾಗಿದೆ. ನಾಳೆ ಬುಧವಾರದಿಂದಲೇ ಹೊಸ ದರಗಳು ಅನ್ವಯವಾಗಲಿವೆ. ಈ ಯೋಜನೆಗಳು ಕಾರ್ಯಸಾಧುವಾಗುವಂತೆ ಮಾಡುವ ಉದ್ದೇಶದಿಂದ ಕಂತಿನ ಪ್ರಮಾಣ ಹೆಚ್ಚಿಸಲಾಗಿದೆ.

## ಹೊನ್ನಾಳಿ: ಡಿಪ್ಲೋಮಾ ತರಗತಿಗಳಿಗೆ ಪ್ರವೇಶ ಆರಂಭ

ಹೊನ್ನಾಳಿ, ಮೇ 31- ತಾಲ್ಲೂಕಿನ ಸುಂಕದಕಟ್ಟೆ ಗ್ರಾಮದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಮೊದಲನೇ ವರ್ಷದ ಡಿಪ್ಲೋಮಾ ತರಗತಿಗಳಿಗೆ ಪ್ರವೇಶ ಪ್ರಾರಂಭವಾಗಿದೆ ಎಂದು ಪ್ರಾಂಶುಪಾಲ ಬಿ. ಶಾಂತಕುಮಾರ್ ನಾಯ್ಕ್ ಮಾಹಿತಿ ನೀಡಿದ್ದಾರೆ.

ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಎರಡು ಕೋರ್ಸ್‌ಗಳು ಲಭ್ಯ ಇವೆ. ಆಟೋಮೊಬೈಲ್ ಇಂಜಿನಿಯರಿಂಗ್ ಕೋರ್ಸ್‌ಗೆ 60 ಸೀಟ್‌ಗಳು ಮತ್ತು ಆಲ್ಟರ್ನೇಟಿವ್ ಎನರ್ಜಿ ಟೆಕ್ನಾಲಜಿ ಕೋರ್ಸ್‌ಗೆ 60 ಸೀಟ್‌ಗಳು ಲಭ್ಯ ಇವೆ ಎಂದು ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕನಿಷ್ಟ ಶೇ.35 ರಷ್ಟು ಅಂಕಗಳನ್ನು ಪಡೆದಿರಬೇಕು. ಪಿಯುಸಿ ಪಾಸ್ ಇಲ್ಲವೇ ಫೇಲ್ ಆದ ವಿದ್ಯಾರ್ಥಿಗಳು ಪ್ರವೇಶಕ್ಕೆ ಅರ್ಹರು. ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿದ್ಯಾರ್ಥಿ ವೇತನ ಲಭಿಸಲಿದೆ. ಈ ಕೋರ್ಸ್‌ಗಳು ವೃತ್ತಿಪರ ಕೋರ್ಸ್‌ಗಳಾಗಿದ್ದು, ಉದ್ಯೋಗ ಅವಕಾಶ ಹೊಂದಿವೆ ಎಂದು ವಿವರಿಸಿದ್ದಾರೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಕೆಲಸಕ್ಕೆ ಬೇಕಾಗಿದ್ದಾರೆ**
ನಿರ್‌ವಿನ್ಸ್ ಕೆಫೆಯಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕರು ಬೇಕಾಗಿದ್ದಾರೆ. ವಯಸ್ಸು - 18 ರಿಂದ 30 ಬೇಕರಿಯಲ್ಲಿ ಕೆಲಸ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ, ಪಿಯುಸಿ ಪಾಸ್ / ಫೇಲ್ ಸ್ಥಳ :ಆಂಜನೇಯ ಬಡಾವಣೆ, ದಾವಣಗೆರೆ. ಹೆಚ್ಚಿನ ಮಾಹಿತಿಗಾಗಿ
93804 69079

**ಸೈಟುಗಳು ಮಾರಾಟಕ್ಕಿವೆ**
ನಿಜಲಿಂಗಪ್ಪ ಬಡಾವಣೆಯಲ್ಲಿ 30x30 ಪಶ್ಚಿಮ, ಡಾಲರ್ಸ್ ಕಾಲೋನಿಯಲ್ಲಿ 30x40, 30x40 ಅಕ್ಕ-ಪಕ್ಕ ಪೂರ್ವ ಉತ್ತರ ಕಾರ್ನರ್ ಸೈಟ್ ಕೊಂಡಜ್ಜಿ ರಸ್ತೆಗೆ ಶಿವಾಲಿ ಥಿಯೇಟರ್ ರಸ್ತೆ, ಕಮರ್ಷಿಯಲ್ 30x40.
ಮಂಜುನಾಥ ಏಜೆಂಟ್
98444 91792

**Teacher Wanted**
A Female Teacher wanted for home tution to teach 4th std ICSE Student Interested Candidate
Contact :
M : 98862 42526

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ್ ಗೃಹ ಮಂಡಳಿಯಲ್ಲಿ 30x40, 30x40 East ಅಕ್ಕ-ಪಕ್ಕ, 40x50 North, 30x50 East, 40x60 South, 30x50 West 40 ಅಡಿ ರೋಡ್‌ಗಿದೆ. Rate : 1800 Ft.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ ಸುತ್ತ-ಮುತ್ತ 30x50 ಪಶ್ಚಿಮ, 30x50 ಉತ್ತರ, ನಿಜಲಿಂಗಪ್ಪ ಬಡಾವಣೆಯಲ್ಲಿ 30x30 ಪಶ್ಚಿಮ, 40x60 ದಕ್ಷಿಣ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ**
ಸುಸಜ್ಜಿತವಾದ ವಾಣಿಜ್ಯ ಮಳಿಗೆ 1ನೇ ಮಹಡಿ ಬ್ಯಾಂಕ್ ಹಾಗೂ ಎಲ್ಲಾ ರೀತಿಯ ವ್ಯಾಪಾರಗಳಿಗೆ, ಶೋ ರೂಂಗೆ ಯೋಗ್ಯವಾದ 4503 ಅಡಿಗಳು ಹಾಗೂ 3250 ಅಡಿಗಳುಳ್ಳ ಸೆಲ್ಲರ್ ಬಾಡಿಗೆಗೆ ಇದೆ. ಹದಡಿ ಮುಖ್ಯರಸ್ತೆ, ಟಿ.ವಿ.ಎಸ್. ಶೋ ರೂಂ ಪಕ್ಕ, ಉದಯ ಮಾರ್ಟ್ (ವಾಣಿ ರೈಸ್ ಮಿಲ್) ಎದುರು, ಶಿವಕುಮಾರಸ್ವಾಮಿ ಬಡವಾಣೆ, ದಾವಣಗೆರೆ.
84959 91223, 96205 95579

**ಮನೆಗಳು ಬಾಡಿಗೆ/ಲೀಜ್‌ಗೆ**
ದೊರೆಯುತ್ತವೆ ವಿಚಾರಿಸಿ.
ಮಹಾಲಕ್ಷ್ಮಿ ಲೇಔಟ್‌ನಲ್ಲಿ ಲೀಜ್‌ಗೆ 10 Laks 2 ಬೆಡ್ ರೂಂ ಫಸ್ಟ್ ಫ್ಲೋರ್, 2 ಬೆಡ್ ರೂಂ ಗ್ರೌಂಡ್ ಫ್ಲೋರ್, LIC ಕಾಲೋನಿಯಲ್ಲಿ ಸಿದ್ಧವೀರಪ್ಪ ಬಡಾವಣೆಯಲ್ಲಿ
ದಕ್ಷೀತ್ ಏಜೆಂಟ್
77955 06795

**ಸೈಟುಗಳು ಮಾರಾಟಕ್ಕಿವೆ**
40x60 South ನಿಜಲಿಂಗಪ್ಪ ಬಡಾವಣೆಯಲ್ಲಿ. 30x42 North ವಿನಾಯಕ ಬಡಾವಣೆಯಲ್ಲಿ, 30x40 North ಆಂಜನೇಯ ಬಡಾವಣೆಯಲ್ಲಿ, 30x40 South ಸಿದ್ಧವೀರಪ್ಪ ಬಡಾವಣೆಯಲ್ಲಿ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಷಿಯರ್ ಮತ್ತು ಇನ್ನಿತರೆ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ರಾಮನಗರ, ಭೂಮಿಕಾನಗರ, ಶಕ್ತಿನಗರ, ನಿಟುವಳ್ಳಿ, ಹೈಟೆಕ್ ಆಸ್ಪತ್ರೆ ಏರಿಯಾಗಳಲ್ಲಿ ವಾಸಿಸುವ ಜನರಿಗೆ ಆದ್ಯತೆ ನೀಡಲಾಗುವುದು. ಸಂಪರ್ಕಿಸಿ :
96060 96695

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
15 ದಿನಗಳ ಸುಖಕರ ಪ್ರವಾಸ, ಕುಲು ಮನಾಲಿ, ಲೇಹ್, ಲಡಾಖ್ ಕಾರ್ಗಿಲ್, ದಿನಾಂಕ : 6.7.2022 ನೇ ಬುಧವಾರದಿಂದ ದಿನಾಂಕ : 20.7.2022ನೇ ಬುಧವಾರದವರೆಗೆ.
94485 33928, 90086 26473

**ಬೇಕಾಗಿದ್ದಾರೆ**
ರೆಡಿಮೇಡ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಹೋಲ್‌ಸೇಲ್ ಹೊಸೈರಿ ಡಿಸ್ಟ್ರಿಬ್ಯೂಷನ್‌ನಲ್ಲಿ ಮಾರ್ಕೆಟ್ ಎಕ್ಸಿಕ್ಯೂಟಿವ್ ಮತ್ತು ಕಂಪ್ಯೂಟರ್ ಆಪರೇಟರ್ ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ :
94485 34819

**ಆಫೀಸ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
10th ಪಾಸ್ / ಫೇಲ್
ವಿಳಾಸ : ಕಿಸಾನ್ ವರ್ಲ್ಡ್
ಹದಡಿ ರೋಡ್, ದಾವಣಗೆರೆ.
97433 83672

**ರ್‍ಯಾಕ್ಸ್ ಮಾರಾಟಕ್ಕಿವೆ**
ಕಿರಾಣಿ ಅಂಗಡಿ, ಬಟ್ಟೆ ಅಂಗಡಿ, ಮಾರ್ಟ್‌ಗಳಿಗೆ (New) ಅನುಕೂಲವಾಗುವ ಸೆಲ್ಫ್, ಕಪಾಟು, ಟೇಬಲ್‌ಗಳು ಮಾರಾಟಕ್ಕಿವೆ.
ವಿಚಾರಿಸಿ :
82775 97757

**REQUIRED**
Marketing sale executive required for pvc pipe and fitting and Tally ERP 9 accountant of 1 year experience
SAMARTH MARKETING Davangere.
97384 86520

1) MEDICAL CONSULTATION Rooms Available.
2) Duty Doctors & Nurse Required.
3) X-RAY MACHINE FOR SALE.
CONTACT
90711 06106

**ಸೈಟುಗಳು ಮಾರಾಟಕ್ಕಿದೆ**
ಆರ್.ಟಿ.ಓ ಆಫೀಸ್ ಎದುರಿಗೆ 20x30 ಅಲಿನೇಷನ್, 15x40 ರೆವಿನ್ಯೂ, 30x40 ರೆವಿನ್ಯೂ.
93534 88902

**WANTED**
In Davanagere
Swiggy Delivery Boys
(Part Time \ Full Time)
Weekly Salary : 5000 / 6000
95382 00008, 99866 92789

**To -Let**
2 BHK First Floor Vidyanagar II Bus Stop. Door No. I/2, Davanagere-5
99019 40727, 98450 08516

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**WANTED**
Accountant, Network Engineer, In Premise/Field Technician, Sales Manager/ Executives, HR, Computer and Office Job. Software Tester and Developer
98444 92888


**ನೇತ್ರ ದಾನ ಶ್ರೇಷ್ಠ ದಾನ**


**ಶಿಕ್ಷಕಿಯರು ಬೇಕಾಗಿದ್ದಾರೆ**
D.Ed, B.A. B.Ed, B.Sc. B.Ed ಮತ್ತು ಯಾವುದೇ ಡಿಗ್ರಿ ಆಗಿರುವ ಶಿಕ್ಷಕಿಯರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ
ಶ್ರೀನಿವಾಸ ಕಾನ್ವೆಂಟ್
ಬಸಾಪುರ, ಬಂಬೂ ಬಜಾರ್ ರಸ್ತೆ, ದಾವಣಗೆರೆ.
99453 24288, 78994 79966

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 90080 67049

**ರೂಂ ಬಾಡಿಗೆಗೆ ಇದೆ**
Hall + Kitchen
K.B Extension, Davanagere.
88673 52640, 98454 56639

**ಓಂ ಶ್ರೀ ಪತ್ರ್ಯಂಗಿರಿ ದೇವಿ ಜ್ಯೋತಿಷ್ಯ ಕೇಂದ್ರ**
ಕೇರಳದಿಂದ ನೇರ ಪರಿಹಾರ ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ಸಮಸ್ಯೆ, ದಾಂಪತ್ಯ ಸಮಸ್ಯೆ, ಫೋನ್ ಮೂಲಕ 2 ದಿನದಲ್ಲಿ ಪರಿಹಾರ.
ಪಂಡಿತ ಶ್ರೀರಾಮಭಟ್ಟ.
M : 97315 83591

**ತಕ್ಷಣಕ್ಕೆ ಮಾರಾಟಕ್ಕೆ**
ಅಥವಾ ಬಾಡಿಗೆಗೆ ಇದೆ
ಹನಗವಾಡಿ ಕೈಗಾರಿಕಾ ಪ್ರದೇಶ ಹರಿಹರ, ಸೈಟ್ ನಂ. 12A, 6500 ಚ.ಅಡಿ ಅಳತೆಯ ನಿವೇಶನದಲ್ಲಿ ಕಟ್ಟಡ ಮತ್ತು 15 HP ವಿದ್ಯುತ್ ಸಂಪರ್ಕ ಹೊಂದಿದೆ.
99729 84005

**ಜೀನಿಯಸ್ಸ್ ಕಿಡ್ಜ್**
ಅಡ್ಮಿಷನ್ ಓಪನ್
Play Group / LKG / UKG
Opposit S.S MALL Shamnur Road.
93802 29199

**ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆ ಬನಶಂಕರಿ ಬಡಾವಣೆಯಲ್ಲಿ 30x50, 30x60, 30x46, 40x50, 30x55 ಇನ್ನೂ ಇತರೆ ಅಳತೆಯ ಸೈಟುಗಳು ಮಾರಾಟಕ್ಕಿವೆ.
ಸಂಪರ್ಕಿಸಿ:
97432 09680

**ASPIRING TO STUDY MBBS**
In Russia, But Confused?
Get Our expert advice now
+91 7022 321 123
www.doctorsquery.com

**ಬೇಕಾಗಿದ್ದಾರೆ**
ವಾರ್ಡ್ ಬಾಯ್ ಹಾಗೂ ಆಯಾ (ಮಹಿಳೆ) ಬೇಕಾಗಿದ್ದಾರೆ. ಸಂದರ್ಶನ ವೇಳೆ : ಬೆಳಿಗ್ಗೆ 11 ಗಂಟೆಗೆ. ಸಂಪರ್ಕಿಸಿ :
ಸಿಟಿ ಹೈಟೆಕ್ ಇಮೇಜಿಂಗ್ ಸರ್ವೀಸಸ್ (ಪ್ರೈ) ಲಿ., ಸಿಟಿ ಸೆಂಟ್ರಲ್ ಹಾಸ್ಪಿಟಲ್ ಬೇಸ್ ಮೆಂಟ್ ನಂ.17, ಅಕ್ಕಮಹಾದೇವಿ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ- 2
ಫೋ: 231932,
91139 70342, 70221 05147

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ಇಂದು ದಿ. 01.06.2022ರ ಬುಧವಾರ ಮತ್ತು ನಾಳೆ ದಿ.02.06.2022ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಬೇಕಾಗಿದ್ದಾರೆ**
ಆಫೀಸ್‌ನಲ್ಲಿ ಕೆಲಸ ಮಾಡಲು ಹಾಗೂ ಕಲೆಕ್ಷನ್ ಮಾಡಲು ಹುಡುಗರು ಬೇಕಾಗಿದ್ದಾರೆ ಸಂಪರ್ಕಿಸಿ :
80886 96717

**House For Sale**
2427/A, 10th Main, 2nd Cross, MCC 'A' Block, Davanagere Residential Home.
60 x 30 Measurements
Contact
98454 58294, 78921 13752

**WANTED**
Banking sector tele caller (Female Only)
Qualification - Any degree / PUC
No. 2257/5 2nd Floor, MCC `A' Block Beside Togataveera Kalyana Mantapa
96869 56142
Interview time : 11 AM

**Job Vacancy**
1) BA, B.Ed (ENG)- 1, 2) BP.Ed CP.Ed- 1, 3) NTC/DEd - 1, 4) BA B.Ed (Hindi)- 1,
Note - Should be Fluent in English
SRI SIDDESWARA PRIMARY AND HIGH SCHOOL, 17th Cross, Anjaneya Badavane, Davangere. Contact us:
98444 43374, 97395 40322

**MBBS**
Aspirants looking for admission in Russia, with low budget, call or visit
+91 7022 321 123
www.doctorsquery.com

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಬಳ : 10,000/-
99161 43003, 95352 43558
Tel Ph : 08192 261003

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ ಮತ್ತು ದಾವಣಗೆರೆ ಸುತ್ತ-ಮುತ್ತ ಪ್ರದೇಶಗಳಲ್ಲಿ ಸೆಕ್ಯೂರಿಟಿ ಗಾರ್ಡ್ ಮತ್ತು ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ : ಮತ್ತು ESI, PF ಸೌಲಭ್ಯವಿರುತ್ತದೆ. ಸಂಪರ್ಕಿಸಿ :
96060 50591, 86603 98210
63667 28552

**ಬೇಕಾಗಿದ್ದಾರೆ**
ಫ್ಯಾಕ್ಟರಿ ಕೆಲಸಕ್ಕೆ ಹೆಣ್ಣು / ಗಂಡು ಮಕ್ಕಳು ಬೇಕಾಗಿದ್ದಾರೆ.ಇಂಡಸ್ಟ್ರೀಯಲ್ ಏರಿಯಾ ಲೋಕಿಕೆರೆ ರೋಡ್, ಸುಬ್ರಮಣ್ಯ ದೇವಸ್ಥಾನದ ಹತ್ತಿರ, ಭೇಟಿಯ ಸಮಯ : ಬೆ. 9:00 ರಿಂದ ಸಂಜೆ 6:00 ರವರೆಗೆ.
97395 55551

**ಮನೆಯಲ್ಲಿಯೇ ಕೆಲಸ**
ಮಹಿಳೆಯರಿಗೆ ಹಾಗೂ ವಿದ್ಯಾರ್ಥಿಗಳಿಗೆ ಪಾರ್ಟ್ ಟೈಮ್ ಹಾಗೂ ಫುಲ್ ಟೈಂ (ಕೆಲಸ) JOB. ವಾರದ ಸಂಬಳ 3,000 ರಿಂದ 5,000 (ಕೋರಿಯರ್ ಸೌಲಭ್ಯವಿದೆ)
91084 18233, 97432 17566

**TO - LET**
TWO BHK FIRST FLOOR (ONLY VEG )
BH. POOJA INTERNATIONAL, # 164, 10th CROSS 'A' BLOCK, DEVARAJ URS EXTN., DAVANGERE.
PH : 90351 09371

**'SBI - CSP' 'ಜನ್‌ಧನ್ ಖಾತೆ'**
ಮಾಡಲಾಗುತ್ತದೆ
(10 ವರ್ಷ ಮೇಲಿನವರಿಗೆ)
Old B.S. ಚನ್ನಬಸಪ್ಪ & ಸನ್ಸ್ ಹಿಂಭಾಗ, # 264/1, ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
ಸಂಪರ್ಕಿಸಿ : 99806 10005

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಓಂ ಶ್ರೀ ಸಾಯಿ ಅನ್ನಪೂರ್ಣೇಶ್ವರಿ ಜ್ಯೋತಿಷ್ಯಾಲಯ**
ನೀವು ತುಂಬಾ ನೊಂದಿದ್ದೀರಾ?
ಉಚಿತ ಭವಿಷ್ಯ, ಶಾಶ್ವತ ಪರಿಹಾರ, ಹೊರನಾಡು ಪೂಜೆಯಿಂದ ಸ್ತ್ರೀ-ಪುರುಷ ವಶೀಕರಣ, ಶತ್ರುನಾಶ, ಪ್ರೀತಿಯಲ್ಲಿ ನಂಬಿ ಮೋಸ, ಸತಿ-ಪತಿ ಕಿರಿಕಿರಿ, ಲಕ್ಷ್ಮಿ ವಶಮ ಭೂಮಿ ವಶ, ಅತ್ತೆ, ಸೊಸೆ ಕಲಹ 100% ಪರಿಹಾರ ಶತಸಿದ್ಧ.
ಪಂಡಿತ್ ಆನಂದ ಗುರೂಜಿ
96064 23948

**ಉಚಿತ ಥೆರಪಿ**
ಬಿಪಿ, ಶುಗರ್, ವೆರಿಕೋಸ್ ವೇನ್ , ಬೆನ್ನು/ ಸೊಂಟ/ಮಂಡಿ ನೋವು,ಗ್ಯಾಸ್ಟ್ರಿಕ್, ಪಾದದಲ್ಲಿ ಉರಿ, ಸಯಾಟಿಕ್ ಇತರೆ ಯಾವುದೇ ಸಮಸ್ಯೆ ಗಳಿಗೆ ನೇರ ಪರಿಹಾರ.
HOME DEMO ಸೌಲಭ್ಯ ವಿದೆ.
86602 35013

**ವೇದಾಂತ ಫೌಂಡೇಶನ್**
ವತಿಯಿಂದ ನಿಮ್ಮ ಉತ್ತಮ ಉದ್ಯೋಗ ಜೀವನವನ್ನು ಕೇವಲ 500 ರೂ ಪಾವತಿ ಮಾಡಿ ಆರಂಭಿಸಿ ಅರ್ಹತೆ ಪಿಯುಸಿ ಮೇಲ್ಪಟ್ಟು. ಕೌಶಲ್ಯ ತರಬೇತಿ ಇಂದೇ ಪಡೆಯಿರಿ. ಶುಲ್ಕವನ್ನು ನಿಮ್ಮ ಸಂಪಾದನೆ ನಂತರ ಪಾವತಿಸಿ. ಸಂಪರ್ಕಿಸಿ :
90360 32079, 95385 38311

**ಬೇಕಾಗಿದ್ದಾರೆ**
ಯಾವುದೇ ಪದವಿ ಅಥವಾ ಫ್ಯಾಷನ್ ಡಿಸೈನಿಂಗ್ ಪಾಸ್ ಅಥವಾ ಫೇಲ್ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
94834 26715, 98869 56213

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637


## ಅಭಿನಂದನೆಗಳು



ನ್ಯಾಷನಲ್ ಸ್ಕೂಲ್ ಆಫ್ ಲಾ (CLAT) ಪರೀಕ್ಷೆಯಲ್ಲಿ ದೇಶಕ್ಕೆ 16ನೇ ರ್‍ಯಾಂಕ್, ಕರ್ನಾಟಕಕ್ಕೆ ಮೊದಲನೇ ರ್‍ಯಾಂಕ್ ಹಾಗೂ ಯುಪಿಎಸ್‌ಸಿ ಪರೀಕ್ಷೆಯಲ್ಲಿ ದೇಶಕ್ಕೆ 31ನೇ ರ್‍ಯಾಂಕ್, ಕರ್ನಾಟಕಕ್ಕೆ ಮೊದಲ ರ್‍ಯಾಂಕ್ ತೆಗೆದುಕೊಂಡಿರುವ ದಾವಣಗೆರೆಯ ಪ್ರಸಿದ್ಧ ಹೋಟೆಲ್ ಉದ್ದಿಮೆದಾರರು ಹಾಗೂ ಅನೇಕರಿಗೆ ಜೀವನೋಪಾಯಕ್ಕಾಗಿ ದಾರಿ ತೋರಿಸಿದ
**ಶ್ರೀಯುತ ಆನಂದರಾವ್**
ಅವರ ಮೊಮ್ಮಗ ಹಾಗೂ
**ಶ್ರೀಯುತ ವಿಠ್ಠಲರಾವ್** ಮತ್ತು **ಶ್ರೀಮತಿ ಸ್ಮಿತಾ ರಾವ್**
ಅವರ ಪುತ್ರನಾದ
**ಚಿ|| ಅವಿನಾಶ್ ರಾವ್**
ಅವರಿಗೆ ಹಾರ್ದಿಕ ಅಭಿನಂದನೆಗಳು.

ಶ್ರಮಜೀವಿ ಮೆಶಿನ್‌ಟೆಕ್,
Shramajeevi Machine Tech
ಶ್ರಮಜೀವಿ ಡೀಲಕ್ಸ್ ಲಾಡ್ಜ್,
Shramajeevi Deluxe Lodge
ಶ್ರಮಜೀವಿ ಗ್ರೂಪ್ಸ್, ಮಾಲೀಕರು, ಕುಟುಂಬದವರು ಹಾಗೂ ನೌಕರ ವರ್ಗದವರು
ಆವರಗೆರೆ, ದಾವಣಗೆರೆ. ಫೋ. : 98866 50977

## ಸಾಧನೆಗೆ ಅಭಿನಂದನೆಗಳು



ಈ ಬಾರಿ ನಡೆದ ಯುಪಿಎಸ್‌ಸಿ ಪರೀಕ್ಷೆಯಲ್ಲಿ ದೇಶಕ್ಕೆ 31ನೇ ರ್‍ಯಾಂಕ್ ಮತ್ತು ಕರ್ನಾಟಕಕ್ಕೆ ಮೊದಲ ರ್‍ಯಾಂಕ್ ಪಡೆದುಕೊಂಡಿರುವ ದಾವಣಗೆರೆಯ ಪ್ರಸಿದ್ಧ ಹೋಟೆಲ್ ಉದ್ದಿಮೆದಾರರಾದ
**ಶ್ರೀ ಕೆ.ವಿ. ಆನಂದ ರಾವ್** ಅವರ ಮೊಮ್ಮಗ ಹಾಗೂ
**ಶ್ರೀ ಕೆ.ಎ.ವಿಠ್ಠಲ್ ರಾವ್ ಮತ್ತು ಶ್ರೀಮತಿ ಸ್ಮಿತಾ ರಾವ್**
ಅವರ ಪುತ್ರನಾದ
**ಚಿ|| ಅವಿನಾಶ್ ರಾವ್**
ಅವರಿಗೆ ಹಾರ್ದಿಕ ಅಭಿನಂದನೆಗಳು.

- P.N. ರವಿಚಂದ್ರ, ಕಾವೇರಿ ಬೇಕರಿ
- H.N. ಶಂಕರನ್ ಹದಡಿ
- T. ಶಂಕರಪ್ಪ, ಮೋತಿ ಸೈಕಲ್ ಮಾರ್ಟ್
- H.N. ಪಟ್ಟಾಭಿರಾಮನ್ ಹದಡಿ
- H.M. ಮಹಾರುದ್ರಯ್ಯ ಸ್ವಾಮಿ

## ಜನ್ಮದಿನದ ಶುಭಾಶಯಗಳು



ಇಂದು ಹುಟ್ಟುಹಬ್ಬದ ಸಂಭ್ರಮದಲ್ಲಿರುವ ದಾವಣಗೆರೆ ಮಹಾನಗರ ಪಾಲಿಕೆ ಮಾಜಿ ಸದಸ್ಯರೂ, ನಮ್ಮ ಆತ್ಮೀಯರೂ ಆದ
**ಶ್ರೀ ಎನ್. ಸುರೇಶ್ ಶಾಮನೂರು**
ಅವರಿಗೆ ಹಾರ್ದಿಕ ಶುಭಾಶಯಗಳು.
ಶ್ರೀಯುತರಿಗೆ ದೇವರು ಆಯುರಾರೋಗ್ಯ ಸುಖ - ಶಾಂತಿ ನೀಡಲೆಂದು ಪ್ರಾರ್ಥನೆ.

**ಎನ್. ಸುರೇಶ್ ಅಭಿಮಾನಿ ಬಳಗ, ಶಾಮನೂರು.**




## ಸಾಧನೆಗೆ ಅಭಿನಂದನೆಗಳು



ಈ ಬಾರಿ ನಡೆದ ಯುಪಿಎಸ್‌ಸಿ ಪರೀಕ್ಷೆಯಲ್ಲಿ ದೇಶಕ್ಕೆ 31ನೇ ರ್‍ಯಾಂಕ್ ಮತ್ತು ಕರ್ನಾಟಕಕ್ಕೆ ಮೊದಲ ರ್‍ಯಾಂಕ್ ಪಡೆದುಕೊಂಡಿರುವ ದಾವಣಗೆರೆಯ ಪ್ರಸಿದ್ಧ ಹೋಟೆಲ್ ಉದ್ದಿಮೆದಾರರಾದ
**ಶ್ರೀ ಕೆ.ವಿ. ಆನಂದ ರಾವ್**
ಅವರ ಮೊಮ್ಮಗ ಹಾಗೂ
**ಶ್ರೀ ಕೆ.ಎ.ವಿಠ್ಠಲ್ ರಾವ್ ಮತ್ತು ಶ್ರೀಮತಿ ಸ್ಮಿತಾ ರಾವ್** ಅವರ ಪುತ್ರನಾದ
**ಚಿ|| ಅವಿನಾಶ್ ರಾವ್**
ಅವರಿಗೆ ಹಾರ್ದಿಕ ಅಭಿನಂದನೆಗಳು.

**ಅಧ್ಯಕ್ಷರು ಹಾಗೂ ಟ್ರಸ್ಟಿಗಳು**
**ಶ್ರೀ ಕೃಷ್ಣ ಸೇವಾ ಟ್ರಸ್ಟ್,** ಎಂ.ಸಿ ಸಿ. ಎ,ಬ್ಲಾಕ್, ದಾವಣಗೆರೆ – 04
ಫೋನ್ ನಂ: 08192 225571

## ಸಾಧನೆಗೆ ಅಭಿನಂದನೆಗಳು



ಈ ಬಾರಿ ನಡೆದ ಯುಪಿಎಸ್‌ಸಿ ಪರೀಕ್ಷೆಯಲ್ಲಿ ದೇಶಕ್ಕೆ 31ನೇ ರ್‍ಯಾಂಕ್ ಮತ್ತು ಕರ್ನಾಟಕಕ್ಕೆ ಮೊದಲ ರ್‍ಯಾಂಕ್ ಪಡೆದುಕೊಂಡಿರುವ ದಾವಣಗೆರೆಯ ಪ್ರಸಿದ್ಧ ಹೋಟೆಲ್ ಉದ್ದಿಮೆದಾರರಾದ
**ಶ್ರೀ ಕೆ.ವಿ. ಆನಂದ ರಾವ್**
ಅವರ ಮೊಮ್ಮಗ ಹಾಗೂ
**ಶ್ರೀ ಕೆ.ಎ.ವಿಠ್ಠಲ್ ರಾವ್ ಮತ್ತು ಶ್ರೀಮತಿ ಸ್ಮಿತಾ ರಾವ್** ಅವರ ಪುತ್ರನಾದ
**ಚಿ|| ಅವಿನಾಶ್ ರಾವ್**
ಅವರಿಗೆ ಹಾರ್ದಿಕ ಅಭಿನಂದನೆಗಳು.

**ಕೆ.ಗಣೇಶ್‌ರಾವ್ ಮತ್ತು ಕೆ. ಉಮೇಶ್‌ರಾವ್**
**ಮತ್ತು ಕುಟುಂಬದವರು**
**ಗಣೇಶ್ ಹೋಟೆಲ್,** ಆರ್.ಎಂ.ಸಿ.ರೋಡ್, ದಾವಣಗೆರೆ.

# ಆಲೂರು ನಿಂಗರಾಜ್ ಹುಟ್ಟುಹಬ್ಬ ಮಕ್ಕಳಿಗೆ ನೋಟ್ ಬುಕ್ ವಿತರಣೆ



**ಆಲೂರಿನಲ್ಲಿ ಸಸಿ ನೆಡುವ ಕಾರ್ಯಕ್ರಮ**

ದಾವಣಗೆರೆ ತಾಲ್ಲೂಕಿನ ಆಲೂರು ಗ್ರಾಮದಲ್ಲಿ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಿಜೆಪಿ ಪ್ರಬಲ ಆಕಾಂಕ್ಷಿ ಆಲೂರು ನಿಂಗರಾಜ್ ಅವರ 50ನೇ ಹುಟ್ಟು ಹಬ್ಬದ ಅಂಗವಾಗಿ ಇಂದು ಸೇವಾ ಸಾಧಕರಿಗೆ ಸನ್ಮಾನ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲಾ ಮಕ್ಕಳಿಗೆ ಉಚಿತ ನೋಟ್‌ಬುಕ್ ವಿತರಣೆ ಹಾಗೂ ಸಸಿ ನೆಡುವ ಕಾರ್ಯಕ್ರಮ ಇಂದು ಬೆಳಿಗ್ಗೆ 11 ಗಂಟೆಗೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಶ್ರೀ ಬಸವಪ್ರಭು ಸ್ವಾಮೀಜಿ ದಿವ್ಯಸಾನ್ನಿಧ್ಯ ವಹಿಸುವರು. ಹನುಮಂತಪ್ಪ ಅಧ್ಯಕ್ಷತೆ ವಹಿಸುವರು. ಸಂಸದ ಜಿ.ಎಂ. ಸಿದ್ದೇಶ್ವರ ಅವರು ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ಶಾಸಕ ಎಸ್.ಎ. ರವೀಂದ್ರನಾಥ್ ನೋಟ್‌ಪುಸ್ತಕ ವಿತರಣೆ ಮಾಡುವರು. ಪ್ರೊ. ಎನ್. ಲಿಂಗಣ್ಣ ಸಮವಸ್ತ್ರ ಹಾಗೂ ಬ್ಯಾಗ್ ವಿತರಿಸುವರು.

ವಿಶೇಷ ಆಹ್ವಾನಿತರಾಗಿ ಎಸ್.ಎಂ. ವೀರೇಶ್ ಹನಗವಾಡಿ, ಸುರೇಶ್ ಕೆ.ಎಂ., ಎಲ್. ಎನ್. ಕಲ್ಲೇಶ್ ಆಗಮಿಸುವರು.

ಮುಖ್ಯ ಅತಿಥಿಗಳಾಗಿ ಶ್ರೀಮತಿ ನಾಗಮ್ಮ ಮಂಜುನಾಥ್, ಶ್ಯಾಗಲೆ ದೇವೇಂದ್ರಪ್ಪ, ಶಂಕ್ರಪ್ಪ, ಮೆಳ್ಳೇಕಟ್ಟೆ ನಾಗರಾಜ್, ಬಸಾಪುರ ರಮೇಶ್, ಕತ್ತಲಗೆರೆ ಅನಿಲ್‌ಕುಮಾರ್, ಓಂಕಾರಪ್ಪ ಕರಿಲಕ್ಕೇನಹಳ್ಳಿ, ಮಹಾಬಲೇಶ್ವರ ಹಿಂಡಸಘಟ್ಟ, ಮಲ್ಲಿಕಾರ್ಜುನ್ ಕಬ್ಬೂರು, ಸುರೇಶ್ ಕುಣೆಬೆಳಕೆರೆ, ಮೂಗಪ್ಪ, ಕೆ.ಎಸ್. ಚನ್ನಬಸಪ್ಪ, ಆನಂದಪ್ಪ, ಸೋಮಣ್ಣ, ಕೋರಿ ಸಿದ್ದಪ್ಪ, ಕೃಷ್ಣಪ್ಪ, ಮಾರಪ್ಪ, ಗೊಲ್ಲರ ಹನುಮಂತಪ್ಪ ಆಗಮಿಸುವರು.

ಕಾರ್ಯಕ್ರಮವು ಶ್ರೀ ಆಲೂರು ನಿಂಗರಾಜ್ ಸ್ನೇಹಿತರ ಬಳಗದಿಂದ ನಡೆಯುವುದು.

# ಹಳೇಬಾತಿ : ಇಂದು ಘನ ತ್ಯಾಜ್ಯ ವಿಲೇವಾರಿ ಘಟಕ, ಅಂಗನವಾಡಿ ಕೇಂದ್ರ ಉದ್ಘಾಟನೆ

ದಾವಣಗೆರೆ ತಾಲ್ಲೂಕಿನ ಹಳೇಬಾತಿ ಗ್ರಾಮದಲ್ಲಿ ಗ್ರಾ.ಪಂ. ಘನತ್ಯಾಜ್ಯ ವಿಲೇವಾರಿ ಘಟಕ, ಅಂಗನವಾಡಿ ಕೇಂದ್ರ, ಶಾಲಾ ಕೊಠಡಿಗಳು, ಡಿಜಿಟಲ್ ಗ್ರಂಥಾಲಯ ಹಾಗೂ ಸಾಂಸ್ಕೃತಿಕ ಭವನ ಕಟ್ಟಡದ ಉದ್ಘಾಟನಾ ಸಮಾರಂಭ ಇಂದು ಬೆಳಿಗ್ಗೆ 11 ಗಂಟೆಗೆ ಗ್ರಾಮ ಪಂಚಾಯತಿ ಆವರಣದಲ್ಲಿ ನಡೆಯಲಿದೆ.

ವಿವಿಧ ಯೋಜನೆಗಳ ಕಟ್ಟಡಗಳ ಉದ್ಘಾಟನೆ ಬೆಳಿಗ್ಗೆ 11 ಗಂಟೆಗೆ ನಡೆಯುವುದು. ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್, ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀಣ್ ಕಟ್ಟಡಗಳ ಉದ್ಘಾಟನೆ ನೆರವೇರಿಸುವರು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ (ಭೈರತಿ) ಉಪಸ್ಥಿತರಿರುವರು. ಎಸ್. ಆರ್. ಸಿದ್ದೇಶ್ ಅಧ್ಯಕ್ಷತೆ ವಹಿಸುವರು.

ಶ್ರೀಮತಿ ಗದಿಗೆಮ್ಮ ಬಸವರಾಜಪ್ಪ ವಿ.ಡಿ., ಬಿ. ಎಸ್. ಸಿದ್ದೇಶ್, ಸೈಯದ್ ಸಾಧಿಕ್, ಮಹಾಂತೇಶ್ ಬೀಳಗಿ, ಡಾ. ಎ. ಚನ್ನಪ್ಪ, ಬಿ. ಆನಂದ್, ಹೆಚ್. ಟಾಟಾಶಿವನ್, ಎನ್.ಜೆ. ಆನಂದ್, ಎಂ.ಆರ್. ಧರಣಿಕುಮಾರ್ ಮುಖ್ಯ ಅತಿಥಿಗಳಾಗಿದ್ದಾರೆ.

# ವಿಶ್ವ ತಂಬಾಕು ರಹಿತ ದಿನಾಚರಣೆ: ಜಾಗೃತಿ ಜಾಥಾ



ದಾವಣಗೆರೆ, ಮೇ 31- ನಗರದ ಚಿಗಟೇರಿ ಜಿಲ್ಲಾಸ್ಪತ್ರೆ ಆವರಣದಲ್ಲಿ ವಿಶ್ವ ತಂಬಾಕು ರಹಿತ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಜಾಗೃತಿ ಜಾಥಾಕ್ಕೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳೂ, ಹಿರಿಯ ಸಿವಿಲ್ ನ್ಯಾಯಾಧೀಶರಾದ ಪ್ರವೀಣ್ ನಾಯಕ್ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಚಿಗಟೇರಿ ಜಿಲ್ಲಾ ಆಸ್ಪತ್ರೆ, ಜಿಲ್ಲಾ ಸರ್ವೇಕ್ಷಣಾ ಘಟಕ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಇವರ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. 'ತಂಬಾಕು ಪರಿಸರಕ್ಕೆ ಮಾರಕ'ಎಂಬ ಪ್ರಸಕ್ತ ವರ್ಷದ ಘೋಷಣೆ ಹಾಗೂ 'ಗಿಡ ನೆಡಿ, ತಂಬಾಕು ಬಿಡಿ' ಎಂಬ ಭಿತ್ತಿ ಪತ್ರಗಳನ್ನು ಒಳಗೊಂಡ ಕಾಲ್ನಡಿಗೆ ಜಾಥವು ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ವಿವಿಧ ಘೋಷಣೆಗಳನ್ನು ಕೂಗುತ್ತಾ ಚಿಗಟೇರಿ ಜಿಲ್ಲಾ ಆಸ್ಪತ್ರೆ ಆವರಣದಿಂದ ಹೊರಟು, ಬಾಪೂಜಿ ಆಸ್ಪತ್ರೆಯ ಮಾರ್ಗವಾಗಿ ಪುನಃ ಜಿಲ್ಲಾಸ್ಪತ್ರೆಗೆ ಬಂದು ತಲುಪಿತು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನಾಗರಾಜ್, ಜಿಲ್ಲಾ ಮಲೇರಿಯಾಧಿಕಾರಿ ಡಾ.ಕೆ. ನಟರಾಜ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ರಾಘವನ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎಲ್ಲಾ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು, ಎನ್.ಸಿ.ಸಿ ವಿದ್ಯಾರ್ಥಿಗಳು ಸೇರಿದಂತೆ ಇತರರು ಭಾಗವಹಿಸಿದ್ದರು.

# ರೈತರ ಸಮಸ್ಯೆಗಳ ಇತ್ಯರ್ಥಕ್ಕಾಗಿ ಆಗ್ರಹಿಸಿ ಪ್ರತಿಭಟನೆ

ದಾವಣಗೆರೆ, ಮೇ 31- ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ ರೈತರ ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ತೀರ್ಮಾನಿಸಿದ್ದರೂ ಈವರೆಗೂ ಯಾವುದೇ ರೈತರ ಅನುಕೂಲಕ್ಕೆ ಕ್ರಮಕೈಗೊಳ್ಳದಿರುವುದನ್ನು ಖಂಡಿಸಿ ನಗರದಲ್ಲಿಂದು ಕರ್ನಾಟಕ ರಾಜ್ಯ ರೈತ ಸಂಘದಿಂದ (ಪ್ರೊ. ನಂಜುಂಡ ಸ್ವಾಮಿ) ನಗರದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಉಪವಿಭಾಗಾಧಿಕಾರಿ ಕಚೇರಿ ಆವರಣದಲ್ಲಿ ಜಮಾಯಿಸಿದ್ದ ಪ್ರತಿಭಟನಾಕಾರರು ಜಿಲ್ಲಾಡಳಿತ, ಉಪವಿಭಾಗಾಧಿಕಾರಿ ಅವರಿಗೆ ಮನವಿ ಸಲ್ಲಿಸಿದರು.

1971 ರಿಂದ 2020 ರವರೆಗೆ ಬಗರ್ ಹುಕ್ಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಿಲ್ಲ. ಒಂದು ವೇಳೆ ಹಕ್ಕುಪತ್ರ ನೀಡಿದವರಿಗೆ ಕಂದಾಯ ಇಲಾಖೆಯಲ್ಲಿ ಸಮರ್ಪಕ ದಾಖಲೆಗಳಿಲ್ಲ. ಭತ್ತ ಮತ್ತು ಇನ್ನಿತರೆ ಬೆಳೆಗಳು ಅಕಾಲಿಕ ಮಳೆಯಿಂದ ಹಾಳಾಗಿದ್ದು, ಸಂಪೂರ್ಣ ಸಮೀಕ್ಷೆಯಾಗಿ ಪರಿಹಾರ ನೀಡಿಲ್ಲ. ಜಿಲ್ಲೆಯಲ್ಲಿ 600 ಕೆರೆಗಳಿದ್ದು , ಈ ಕೆರೆಗಳ ಬಗ್ಗೆ 2000 ನೇ ಇಸವಿಯಿಂದ 2020 ರವರೆಗೆ ಬಂದ ಜಿಲ್ಲಾಧಿಕಾರಿಗಳ ಸಭೆ ನಡೆದಿರುವುದಷ್ಟೇ ಸರಿ. ಯಾವುದೇ ಕೆರೆಗಳನ್ನು ಒತ್ತುವರಿ ತೆರವುಗೊಳಿಸಿಲ್ಲ ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ತಮ್ಮ ಇಲಾಖೆಯ ಕೆರೆಗಳ ಮಾಹಿತಿ ಇಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಳೆಗಾಲದಲ್ಲಿ ಗ್ರಾಮೀಣ ಭಾಗದ ರಸ್ತೆಗಳು ಹಾಳಾಗಿದ್ದು, ಯಾವುದೇ ಸಂಬಂಧಿಸಿದ ಅಧಿಕಾರಿಗಳು ಈವರೆಗೂ ಭೇಟಿ ನೀಡದೆ, ಕಛೇರಿಯಲ್ಲಿ ಕಾಲ ಕಳೆಯುತ್ತಿದ್ದಾರೆ. ಈ ಎಲ್ಲಾ ವಿಷಯಗಳು 2000 ರಿಂದ 2022 ರವರೆಗೂ ಸಹ ವಿಷಯಗಳು ಚರ್ಚೆಯಾಗುತ್ತಿರುವುದಷ್ಟೇ. ಸರ್ಕಾರಗಳು ಗ್ರಾಮ ಭೇಟಿ, ಗ್ರಾಮ ವಾಸ್ತವ್ಯ ಇವು ನೆಪ ಮಾತ್ರ. ಇದು ಕಾರ್ಯಗತಗೊಳ್ಳುವುದು ಕನ್ನಡಿಯೊಳಗಿನ ಗಂಟಂತೆ. 15 ದಿನಗಳೊಳಗಾಗಿ ರೈತರ ಸಮಸ್ಯೆಗಳನ್ನು ಇತ್ಯರ್ಥಪಡಿಸದೇ ಇದ್ದಲ್ಲಿ ಜಿಲ್ಲಾಡಳಿತ, ಉಪವಿಭಾಗಾಧಿಕಾರಿ ಕಛೇರಿ ಎದುರು ಅನಿರ್ದಿಷ್ಟ ಚಳುವಳಿ ಮಾಡಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಸಂಘದ ರಾಜ್ಯ ಕಾರ್ಯದರ್ಶಿ ಬಲ್ಲೂರು ರವಿಕುಮಾರ್, ಜಿಲ್ಲಾಧ್ಯಕ್ಷ ಕಬ್ಬಳ ಪ್ರಸಾದ್, ಉಪಾಧ್ಯಕ್ಷ ರಾಂಪುರದ ಬಸವರಾಜ್, ಕುಮಾರನಹಳ್ಳಿ ಮಂಜುನಾಥ, ಅಣಬೇರು ಕುಮಾರ ಸ್ವಾಮಿ ಸೇರಿದಂತೆ ಇತರರು ಭಾಗವಹಿಸಿದ್ದರು.

# ಮುಂಗಾರು : ಬಿತ್ತನೆ ಬೀಜ ವಿತರಣಾ ಕೇಂದ್ರ ಉದ್ಘಾಟನೆ



**ಹರಿಹರ**

ಹರಿಹರ, ಮೇ 31 - 2022-23 ನೇ ಸಾಲಿನ ಮುಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಣಾ ಕೇಂದ್ರವನ್ನು ಶಾಸಕ ಎಸ್.ರಾಮಪ್ಪ ಉದ್ಘಾಟಿಸಿದರು. ಬಿತ್ತನೆ ಬೀಜಗಳಾದ ಮೆಕ್ಕೆಜೋಳ, ಹೆಸರು, ತೊಗರಿ ಬೀಜಗಳನ್ನು ಕಸಬಾ ಮತ್ತು ಮಲೇಬೆನ್ನೂರು ರೈತ ಸಂಪರ್ಕ ಕೇಂದ್ರಗಳಿಂದ ವಿತರಿಸಲಾಗುತ್ತಿದೆ.

ಸರ್ಕಾರದಿಂದ ಸಾಮಾನ್ಯ ವರ್ಗದ ರೈತರಿಗೆ ಶೇ.50 ಮತ್ತು ಪ.ಜಾತಿ/ಪ.ಪಂಗಡದ ರೈತರಿಗೆ ಶೇ.75 ರ ರಿಯಾಯತಿ ದರದಲ್ಲಿ ಗರಿಷ್ಟ 5 ಎಕರೆವರೆಗೆ ವಿತರಿಸಲಾಗುತ್ತದೆ.

ಇದೇ ಸಂದರ್ಭದಲ್ಲಿ ಶಾಸಕರು ಇಲಾಖೆಯಿಂದ ಸರಬರಾಜಾಗಿದ್ದ ತೊಗರಿ ಮತ್ತು ಹೆಸರು ಮಿನಿ ಕಿಟ್‌ಗಳನ್ನು ರೈತರಿಗೆ ಸಾಂಕೇತಿಕವಾಗಿ ವಿತರಿಸಿದರು.

ಮೆಕ್ಕೆಜೋಳದಲ್ಲಿ ತೊಗರಿ ಬೆಳೆಯನ್ನು ಅಕ್ಕಡಿ ಬೆಳೆಯಾಗಿ ಬೆಳೆದು ಆದಾಯವನ್ನು ಹೆಚ್ಚಿಸಿಕೊಳ್ಳುವುದರ ಜೊತೆಗೆ, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಿಕೊಳ್ಳಲು ರೈತರಿಗೆ ಶಾಸಕರು ಕರೆ ನೀಡಿದರು.

ಈ ಸಂದರ್ಭದಲ್ಲಿ ಸಹಾಯಕ ಕೃಷಿ ನಿರ್ದೇಶಕರಾದ ಎ.ನಾರನಗೌಡ, ಕೃಷಿ ಅಧಿಕಾರಿಗಳಾದ ಕೆ.ಮಲ್ಲಿಕಾರ್ಜುನ, ಆತ್ಮ ಯೋಜನೆಯ ಯೋಗೇಶಗೌಡ ಮತ್ತಿತರರು ಉಪಸ್ಥಿತರಿದ್ದರು.

# ಇಂದು ಮಾತೃದೇವೋ ಸಮಾಜ ಕಲ್ಯಾಣ, ಶೈಕ್ಷಣಿಕ ಚಾರಿಟಬಲ್ ಟ್ರಸ್ಟ್ ಉದ್ಘಾಟನೆ

ದಾವಣಗೆರೆಯ ಜಯನಗರ 'ಸಿ' ಬ್ಲಾಕ್‌ನಲ್ಲಿರುವ ಮಾತೃದೇವೋ ಸಮಾಜ ಕಲ್ಯಾಣ ಮತ್ತು ಶೈಕ್ಷಣಿಕ ಚಾರಿಟಬಲ್ ಟ್ರಸ್ಟ್ ಉದ್ಘಾಟನಾ ಸಮಾರಂಭವು ಇಂದು ಬೆಳಿಗ್ಗೆ 11.30 ಕ್ಕೆ ತಾಲ್ಲೂಕಿನ ತುರ್ಚಘಟ್ಟ ಗ್ರಾಮದ ಸಾಧನಾ ವೃದ್ಧಾಶ್ರಮ ಮತ್ತು ಅನಾಥಾಶ್ರಮದ ಆವರಣದಲ್ಲಿ ನಡೆಯಲಿದೆ.

ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಬಿಜೆಪಿ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಲೋಕಿಕೆರೆ ನಾಗರಾಜ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಟ್ರಸ್ಟ್ ಸಂಸ್ಥಾಪಕ ಎಸ್.ಪಿ. ಶ್ರೀನಿವಾಸ್ ಅಧ್ಯಕ್ಷತೆ ವಹಿಸಲಿದ್ದು, ಬಯಲುಸೀಮೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಣಬೇರು ಜೀವನಮೂರ್ತಿ, ಮೇಯರ್ ಜಯಮ್ಮ ಗೋಪಿನಾಯ್ಕ, ದೂಡಾ ಅಧ್ಯಕ್ಷ ಕೆ.ಎಂ. ಸುರೇಶ್ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಮಹಿಳಾ ಮತ್ತು ಮಕ್ಕಳ ಸಾಧನ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷೆ ಡಾ. ಪುಷ್ಪಲತಾ ಪವಿತ್ರರಾಜ್, ಪಾಲಿಕೆ ಸದಸ್ಯೆ ವೀಣಾ ನಂಜಪ್ಪ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ದೇವರಮನಿ ಶಿವಕುಮಾರ್, ಜಿ.ಪಂ. ಮಾಜಿ ಅಧ್ಯಕ್ಷೆ ಕೆ.ಆರ್. ಜಯಶೀಲಾ, ಬಿಜೆಪಿ ಉತ್ತರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಸಂಗನಗೌಡ್ರು, ಮಾಜಿ ಮೇಯರ್ ಎಸ್.ಟಿ. ವೀರೇಶ್, ಬಿ.ಜೆ. ಅಜಯ್‌ಕುಮಾರ್, ಬಿಜೆಪಿ ಉತ್ತರ ವಿಧಾನಸಭಾ ಕ್ಷೇತ್ರದ ಓಬಿಸಿ ಮೋರ್ಚಾ ಅಧ್ಯಕ್ಷ ಅಡಾಣಿ ಸಿದ್ಧಪ್ಪ ಭಾಗವಹಿಸಲಿದ್ದಾರೆ.

# ಅವಿನಾಶ್‌ಗೆ ಎಚ್‌ಬಿಎಂ ಅಭಿನಂದನೆ

ದಾವಣಗೆರೆ, ಮೇ 31- ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ ರಾಜ್ಯಕ್ಕೇ ಪ್ರಥಮ ಸ್ಥಾನದಲ್ಲಿ ಉತ್ತೀರ್ಣತೆ ಹೊಂದಿರುವ ನಗರದ ಅವಿನಾಶ್ ಅವರನ್ನು ಹಿರಿಯ ಪತ್ರಕರ್ತ ಎಚ್.ಬಿ.ಮಂಜುನಾಥ್ ಅಭಿನಂದಿಸಿದ್ದಾರೆ. 'ಓದುವ ಆಸಕ್ತಿ, ಓದಿದ್ದನ್ನು ಅರ್ಥ ಮಾಡಿಕೊಳ್ಳುವ ಶಕ್ತಿ, ಅರ್ಥವಾಗಿದ್ದನ್ನು ಜ್ಞಾಪಕದಲ್ಲಿಟ್ಟುಕೊಳ್ಳುವ ಯುಕ್ತಿ' ಇದ್ದಲ್ಲಿ ಯಾವ ಪರೀಕ್ಷೆ ಯೂ ಕಷ್ಟವಲ್ಲ, ಐ.ಎ.ಎಸ್. ಮಾಡಿ' ಎಂದು ಪ್ರತಿಭಾ ಪುರಸ್ಕಾರಗಳಲ್ಲಿ, ಶಾಲಾ ಕಾಲೇಜು ಕಾರ್ಯಕ್ರಮಗಳಲ್ಲಿ ಹೇಳುತ್ತಲೇ ಇದ್ದೆ, ಅದನ್ನು ಅವಿನಾಶ್ ಸಾಧಿಸಿ ತೋರಿಸಿದ್ದಾನೆ ಎಂದು ಶ್ರೀಕೃಷ್ಣ ಮಿತ್ರ ವೃಂದದ ಸಂಸ್ಥಾಪಕ ಪ್ರವರ್ತಕರೂ ಆಗಿರುವ ಮಂಜುನಾಥ್ ಸಂತೋಷ ವ್ಯಕ್ತಪಡಿಸಿದ್ದಾರೆ.

# ಅವಿನಾಶ್‌ಗೆ ಆನ್‌ಲೈನ್‌ನಲ್ಲಿ ಶುಭಾಶಯ ಕೋರಿದ ದವನ ವಿದ್ಯಾರ್ಥಿಗಳು






ದಾವಣಗೆರೆ, ಮೇ 31- ಕೇಂದ್ರ ನಾಗರಿಕ ಸೇವಾ ಆಯೋಗದ ಪರೀಕ್ಷೆ (ಯುಪಿಎಸ್‌ಸಿ) ಯಲ್ಲಿ ಮೊದಲ ಪ್ರಯತ್ನದಲ್ಲಿಯೇ ರಾಷ್ಟ್ರಮಟ್ಟದಲ್ಲಿ 31 ನೇ ಸ್ಥಾನ ಪಡೆದು ರಾಜ್ಯಕ್ಕೆ ಮೊದಲಿಗ ಆಗಿರುವ ನಗರದ ವಿ. ಅವಿನಾಶ್ ಅವರಿಗೆ ತಾವು ಪಿಯುಸಿ ವಿದ್ಯಾಭ್ಯಾಸ ಮಾಡಿದ್ದ ನಗರದ ದವನ್ ಕಾಲೇಜಿನಲ್ಲಿ ಇಂದು ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಶುಭಾಶಯ ಕೋರಿದರು.

ಈ ಸಂದರ್ಭದಲ್ಲಿ ಆನ್‌ಲೈನ್‌ನಲ್ಲಿ ವಿದ್ಯಾರ್ಥಿಗಳೊಂದಿಗೆ ಮಾತನಾಡಿದ ಅವಿನಾಶ್, ತಮ್ಮ ಯಶಸ್ಸಿನ ಹಿಂದೆ ಇರುವ ಪರಿಶ್ರಮವನ್ನು ಹಂಚಿಕೊಂಡು ಸ್ಫೂರ್ತಿದಾಯಕ ಮಾತುಗಳನ್ನಾಡಿದರು. ತಮ್ಮ ಪೋಷಕರ ಸಹಕಾರ ತಾವು ಓದಿದ ಶಾಲಾ - ಕಾಲೇಜಿನ ಅಧ್ಯಾಪಕರ ಮಾರ್ಗದರ್ಶನವನ್ನು ನೆನೆದರು.

ದವನ್ ಕಾಲೇಜಿನ ಕಾರ್ಯದರ್ಶಿ ವೀರೇಶ್ ಪಟೇಲ್ ಅವರು ಅವಿನಾಶ್ ಅವರ ಈ ಸಾಧನೆಯಿಂದ ನಗರದ ಹೆಸರು ರಾಷ್ಟ್ರಮಟ್ಟದಲ್ಲಿ ಗುರುತಿಸುವಂತಾ ಗಿದೆ. ನಗರದ ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದಿರೆಂದು ಅವಿನಾಶ್ ಅವರಿಗೆ ಶುಭಾಶಯ ಕೋರಿದರು.

ಈ ಸಂದರ್ಭದಲ್ಲಿ ನಿರ್ದೇಶಕ ಹರ್ಷರಾಜ್ ಗುಜ್ಜರ್ ಅವರು ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲಿ ಅವಿನಾಶ್ ಟಾಪರ್ ಆಗಿದ್ದನ್ನು ಸ್ಮರಿಸಿದರು. ಶ್ರೀಮತಿ ಸುಮಿತ್ರ ಹಾಗೂ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಯೋಗ ತರಬೇತಿ ಶಿಬಿರ

ಸರ್ಕಾರಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ಹಾಗೂ ಜಿಲ್ಲಾ ಆಯುಷ್ ಇಲಾಖೆ ಇವರ ವತಿಯಿಂದ ಇಂದಿನಿಂದ ಇದೇ ದಿನಾಂಕ 20 ರವರೆಗೆ 3 ನೇ ಕ್ರಾಸ್ ಎ ಬ್ಲಾಕ್, ದೇವರಾಜು ಅರಸು ಬಡಾವಣೆಯಲ್ಲಿರುವ ಸರ್ಕಾರಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಆಸ್ಪತ್ರೆಯಲ್ಲಿ ಯೋಗ ತರಬೇತಿ ಶಿಬಿರ ನಡೆಯಲಿದೆ.

20 ದಿನಗಳ ಕಾಲ ನುರಿತ ಯೋಗ ಶಿಕ್ಷಕರ ಮೂಲಕ ಯೋಗ ಕಲಿಸಲಾಗುವುದು. ಅವರವರ ಆರೋಗ್ಯಕ್ಕೆ ತಕ್ಕಂತೆ ಯೋಗಾಭ್ಯಾಸ, ಪ್ರಾಣಾಯಾಮಗಳನ್ನು ತಿಳಿಸಿಕೊಡಲಾಗುವುದು ಎಂದು ಆಯುಷ್ ವೈದ್ಯರಾದ ಡಾ. ಬಿ.ಆರ್. ಗಂಗಾಧರ ವರ್ಮ ತಿಳಿಸಿದ್ದಾರೆ.

**REQUIRED ACCOUNTANT AND ADMINISTRATOR**

Well educated, Experienced, Proficient, Computer Savvy aspirant required to administrator an Educational Institution (College & Hostel) having track record of more than 10 years. Also required CA final or recently passed out chartered accountant for accountant / chief accountant post, Interested may send resume to e-mail office@nggn.in

74833 62331

**Used Furniture for sale**

office table, revolving chairs, sofa, jewellery showroom counter, steel rack for stationery articles and etc for sale

SHANTALA chamarajpet, davangere

9686195323, 9686195326

# ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಮರು ಪರಿಷ್ಕರಣ ಸಮಿತಿ ರದ್ಧತಿಗೆ ಆಗ್ರಹ




ದಾವಣಗೆರೆ, ಮೇ 31- ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಮರು ಪರಿಷ್ಕರಣಾ ಸಮಿತಿಯನ್ನು ಸರ್ಕಾರ ಕೂಡಲೇ ರದ್ದುಪಡಿಸಿ ಹಿಂದಿನ ವರ್ಷದ ಪಠ್ಯವನ್ನೇ ಮಕ್ಕಳಿಗೆ ವಿತರಿಸುವಂತೆ ಆಗ್ರಹಿಸಿ ನಗರದಲ್ಲಿ ಇಂದು ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣ ಗೌಡ ಬಣ) ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಉಪವಿಭಾಗಾಧಿಕಾರಿ ಕಚೇರಿ ಮುಂಭಾಗ ಜಮಾಯಿಸಿದ್ದ ಕರವೇ ಪದಾಧಿಕಾರಿಗಳು, ರೋಹಿತ್ ಚಕ್ರತೀರ್ಥ ಅವರ ಭಾವಚಿತ್ರವನ್ನು ದಹಿಸಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಉಪವಿಭಾಗಾಧಿಕಾರಿ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ರಾಜ್ಯ ಸರ್ಕಾರವು ಪ್ರೊ. ಬರಗೂರು ರಾಮಚಂದ್ರಪ್ಪ ನೇತೃತ್ವದ ಪಠ್ಯ ಪರಿಷ್ಕರಣಾ ಸಮಿತಿ ಸಿದ್ಧಪಡಿಸಿದ್ದ ಶಾಲಾ ಪಠ್ಯ ಪುಸ್ತಕಗಳನ್ನು ತರಾತುರಿಯಲ್ಲಿ ಮರು ಪರಿಷ್ಕರಿಸಲು ರೋಹಿತ್ ಚಕ್ರತೀರ್ಥ ಎಂಬುವವರ ನೇತೃತ್ವದಲ್ಲಿ ಪಠ್ಯ ಮರು ಪರಿಷ್ಕರಣಾ ಸಮಿತಿ ನೇಮಿಸಿ ಅದರ ಶಿಫಾರಸ್ಸಿನ ಅನ್ವಯ ಭಾಷಾ ಪಠ್ಯ ಹಾಗೂ ಸಮಾಜ ವಿಜ್ಞಾನ ಪಠ್ಯಗಳಲ್ಲಿ ಖಂಡನಾರ್ಹ ಬದಲಾವಣೆ ತಂದಿದೆ. ಈಗ ಈ ಮರು ಪರಿಷ್ಕರಿಸಿದ ಪಠ್ಯ ಪುಸ್ತಕಗಳನ್ನು ಮಕ್ಕಳಿಗೆ ಹಂಚಲು ಸರ್ಕಾರ ಹೊರಟಿದೆ. ಸರ್ಕಾರದ ಈ ಕ್ರಮ ಬೇಜವಾಬ್ದಾರಿತನದಿಂದ ಕೂಡಿದ್ದು, ಇದರಿಂದ ಲಕ್ಷಾಂತರ ಮಕ್ಕಳ ಭವಿಷ್ಯ ಮತ್ತು ಶಿಕ್ಷಣದ ಮೇಲೆ ನಕಾರಾತ್ಮಕ ಪರಿಣಾಮಗಳಾಗಲಿವೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಪಠ್ಯ ಪುಸ್ತಕಗಳಲ್ಲಿ ಯಾವುದೇ ಬದಲಾವಣೆ ತರುವುದನ್ನು ಯಾವುದೇ ಸರ್ಕಾರ ಮನಸ್ಸಿಗೆ ಬಂದ ರೀತಿಯಲ್ಲಿ ಮಾಡುವಂತಿಲ್ಲ. ಅದಕ್ಕೆ ತನ್ನದೇ ರೀತಿ, ನೀತಿ, ಘನತೆಗಳಿರುತ್ತವೆ. ರಾಷ್ಟ್ರೀಯ ಪಠ್ಯ ಚೌಕಟ್ಟುಗಳ ಮಾರ್ಗಸೂಚಿಯಿದೆ. ಸಂವಿಧಾನದ ತತ್ವಗಳಿಗೆ ಅನುಸಾರವಾಗಿ ಇಂತಹ ಸಮಿತಿಗಳನ್ನು ರಚಿಸಬೇಕಾಗಿದೆ. ಆದರೆ ರಾಜ್ಯ ಸರ್ಕಾರ ಮೇಲ್ನೋಟಕ್ಕೆ ಕಾಣುವಂತೆ ಎಲ್ಲಾ ರೀತಿ ನೀತಿಗಳನ್ನು ಗಾಳಿಗೆ ತೂರಿ, ಯಾರದೋ ಅಜೆಂಡಾವನ್ನು ಶಿಕ್ಷಣದಲ್ಲಿ ತೂರಿಸಲು ಒಂದೇ ಸಿದ್ಧಾಂತ ಸಂಘಟನೆಯ ಬೆಂಬಲಿಗರನ್ನು ಸಮಿತಿಯಲ್ಲಿ ಇರಿಸಿ ದುಂಡಾವರ್ತನೆ ಪ್ರದರ್ಶಿಸಿದೆ ಎಂದು ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ದೂರಿದರು.

ಪ್ರತಿಭಟನೆಯಲ್ಲಿ ಮಹಿಳಾ ಘಟಕದ ಅಧ್ಯಕ್ಷರಾದ ಬಸಮ್ಮ, ಶಾಂತಮ್ಮ, ಸಾಕಮ್ಮ, ನಗರ ಘಟಕದ ಎನ್. ಟಿ. ಹನುಮಂತಪ್ಪ, ಜಿ.ಎಸ್. ಸಂತೋಷ್, ಗಜೇಂದ್ರ, ಅನಿಲ್, ಲೋಕೇಶ್, ಜಬಿ ಉಲ್ಲಾ, ಅಬ್ದುಲ್ ಗಫೂರ್ ಅಯೂಬ್, ಶಫಿವುಲ್ಲಾ, ನಾಗರಾಜ್ ಮೆಹರ್ವಾಡೆ, ಮಂಜುಶ್ರೀ ಗೌಡ್ರು, ತಿಪ್ಪೇಶ್, ಬಾಲಸುಬ್ರಮಣ್ಯ, ಎಂ. ಮಾಂತೇಶ್, ನವೀನ್, ರಾಕಿಬ್, ಮುನ್ನ, ಬಸವನಕೋಟೆ ಬಸವರಾಜ್, ಉಜ್ಜಪ್ಪವಡೆಯರಹಳ್ಳಿ ಪ್ರಶಾಂತ್, ಸಿದ್ದೇಶ್, ಮಾಂತೇಶ್, ರಮೇಶ್, ಗೌರೀಶ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ನಗರದಲ್ಲಿ ಇಂದು 'ವಿದ್ಯಾದಾನ ಮಹಾದಾನ' ಕಾರ್ಯಕ್ರಮ

ದಾವಣಗೆರೆ, ಮೇ 31- ಜಿಲ್ಲಾ 3 ಮತ್ತು 4 ಚಕ್ರ ಗೂಡ್ಸ್ ವಾಹನ ಚಾಲಕರ ಮತ್ತು ಮಾಲೀಕರ ಸಂಘದಿಂದ ಸಂಘದ ಮಹಾಪೋಷಕರಾಗಿರುವ ಮಹಾಂತೇಶ್ ಒಣರೊಟ್ಟಿ ಅವರ ಸಹಯೋಗದಲ್ಲಿ ನಾಳೆ ದಿನಾಂಕ 1ರ ಬುಧವಾರ 6ನೇ ವರ್ಷದ 'ವಿದ್ಯಾದಾನ ಮಹಾದಾನ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಬಿ.ಪಳನಿಸ್ವಾಮಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 10 ಗಂಟೆಗೆ ಹೈಸ್ಕೂಲ್ ಮೈದಾನದಲ್ಲಿರುವ ಬ್ಯಾಸ್ಕೆಟ್ ಬಾಲ್ ಗ್ರೌಂಡ್‌ನಲ್ಲಿ ನಡೆಯುವ ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ.ಏಕಾಂತಪ್ಪ ನೆರವೇರಿಸಲಿದ್ದಾರೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಪಾಲಿಕೆ ಮಾಜಿ ಸದಸ್ಯ ದಿನೇಶ್ ಕೆ.ಶೆಟ್ಟಿ, ಜಿಲ್ಲಾ ಕಾರ್ಯನಿರತರ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ, ಬಿಜೆಪಿ ಮುಖಂಡ ಬಾಡದ ಆನಂದರಾಜ್, ಜಿಲ್ಲಾ ಲಾರಿ ಮಾಲೀಕರು ಹಾಗೂ ಟ್ರಾನ್ಸ್‌ಪೋರ್ಟ್ ಸಂಘದ ಅಧ್ಯಕ್ಷ ಸೈಯದ್ ಸೈಫುಲ್ಲಾ, ಸಿಳ್ಳೇಕ್ಯಾತ ಸಂಘದ ಮಾಜಿ ಅಧ್ಯಕ್ಷ ಹೇಮಂತ್, ಸುವರ್ಣ ಕರ್ನಾಟಕ ರಾಜ್ಯಾಧ್ಯಕ್ಷ ಸಂತೋಷ್, ಉದ್ಯಮಿ ದಿಲೀಪ್ ಜೈನ್, ಕರವೇ ಜಿಲ್ಲಾ ಗೌರವಾಧ್ಯಕ್ಷ ವಾಸುದೇವ್ ರಾಯ್ಕರ್ ಆಗಮಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಸದಸ್ಯ ಮಾನಪ್ಪ, ಸುವರ್ಣ ಕರ್ನಾಟಕ ವೇದಿಕೆ ರಾಜ್ಯಾಧ್ಯಕ್ಷ ಸಂತೋಷ್ ಕುಮಾರ್ ಉಪಸ್ಥಿತರಿದ್ದರು.





ದಾವಣಗೆರೆ ಸಿಟಿ ಸಿದ್ದವೀರಪ್ಪ ಬಡಾವಣೆಯ ರಿಯಲ್ ಎಸ್ಟೇಟ್ ಉದ್ಯಮಿಗಳೂ, ಬಡವರ ಬಂಧು, ದೀನ - ದಲಿತರ ಸಾಕಾರ ಮೂರ್ತಿ, ಸರ್ವ ಜನಾಂಗದ ಒಡನಾಡಿ, ಬುದ್ಧನಂತೆ ಶಾಂತಿಪ್ರಿಯ, ಬಸವಣ್ಣನವರಂತೆ ಕಾಯಕವೇ ಕೈಲಾಸ ಎಂದು ನಂಬಿರುವ ಹಾಗೂ ಮಾಜಿ ನಗರಸಭೆ ಸದಸ್ಯರೂ, ಕಾಂಗ್ರೆಸ್ ಮುಖಂಡರೂ ಆದ

**ಶ್ರೀ ಶಾಮನೂರು ಎಸ್. ಬಸವರಾಜ್**

ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

✦ ಕಣ್ಣಾಳ ಅಂಜಿನಪ್ಪ, ಸಂಸ್ಥಾಪಕ ಅಧ್ಯಕ್ಷರು, ಎಸ್.ಎಸ್. ಮಲ್ಲಿಕಾರ್ಜುನ ಯುವ ಶಕ್ತಿ ಬಳಗ ರಾಜ್ಯ ಪ್ರಧಾನ ಕಾರ್ಯದರ್ಶಿ ಕರ್ನಾಟಕ ದಲಿತ ಮಹಾಸಭಾ (ರಿ.), ಬೆಂಗಳೂರು.
✦ ಸುಧಾಕರ್, ಆಟೋ ಚಾಲಕರ ಸಂಘ. ✦ ನಿಂಗಪ್ಪ ಡಿ.ಎಸ್.ಎಸ್. ✦ ಶಾಮನೂರು ನಾಗರಾಜ್
✦ ಭಾಸ್ಕರ್ ರಾವ್ ಪಿ.ಎನ್. ✦ ಬಿ.ಎನ್. ರಂಗಸ್ವಾಮಿ ಕಾಂಗ್ರೆಸ್ ಮುಖಂಡರು ✦ ಆಪೆ ಗಾಡಿ ಮಂಜುನಾಥ್
✦ ಮಡಿವಾಳರ ಸುರೇಶ್ ✦ ಬಿ.ಹೆಚ್. ರಾಘುವೇಂದ್ರ ಎಸ್.ಎಸ್. ಮಾಲ್ ✦ ಬೆಳಕೇರಿ ಅಂಜಿನಪ್ಪ
✦ ಬಿ.ಎನ್. ಮಂಜುನಾಥ್ ✦ ಆರ್. ಹನುಮಂತ್ ✦ ಕೆ.ಎನ್. ಹರೀಶ್ ✦ ಮಲ್ಲೇಶ್
✦ ಎಸ್. ಬಸವರಾಜ್ ಅಭಿಮಾನಿಗಳು ಹಾಗೂ ಎಸ್.ಎಸ್. ಮಲ್ಲಿಕಾರ್ಜುನ ಯುವ ಶಕ್ತಿ ಬಳಗದ ಪದಾಧಿಕಾರಿಗಳು, ಶಾಮನೂರು ಗ್ರಾಮದ ಕಾಂಗ್ರೆಸ್ ಮುಖಂಡರು ಹಾಗೂ ಅಭಿಮಾನಿಗಳು.










JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte